ಸ್ ಸ 1909ನೆ ಇಸವಿ ಆಗಸ್ಟ್ 21ನೆ ತಾರೀಖಿನಲ್ಲಿ ನಡೆದ ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಪ್ರೊಸೀಡಿಂಗ್ಸು.

ಹಾಜರು.

1. ಕೆ. ಚಾಂಡಿ, ಎಸ್ಕ್ವಯರ್, ಬಿ.ಎ., ಪ್ರೆಸಿಡೆಂಟರು.

ಎಕ್ಸ್ ಅಫಿಷಿಯೋ ಮೆಂಬರುಗಳು.

2. ಟಿ. ಕೆ. ಸುಂದರರಾಜೈಯ್ಯಂಗಾರ್, ಎಸ್ಕ್ವಯರ್, ನಂಜನಗೂಡು ಸಬ್ ಡಿವಿಜ್ ಆಫಿಸರು.
3. ಜಿ. ಬಿ. ಹೆಬ್ಬಿಕಾರ್, ಎಸ್ಕ್ವಯರ್, ಬಿ.ಎ. ಎಲ್.ಎಲ್.ಬಿ., ಮೈಸೂರು ಸಬ್-ಡಿವಿಜ್ ಆಫಿಸರು.
4. ಸಿ. ನಾರಾಯಣರಾವ್, ಎಸ್ಕ್ವಯರ್, ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರು.
5. ಎಸ್. ವೆಂಕಟರಂಗಂ, ಎಸ್ಕ್ವಯರ್, ಬಿ.ಎ.,ಬಿ.ಎಲ್., ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸರು ಮತ್ತು ವೈಸ್ ಪ್ರೆಸಿಡೆಂಟರು.
6. ಟಿ. ಎಸ್. ಕೇಷಯ್ಯಂಗಾರ್, ಎಸ್ಕ್ವಯರ್, ಮೈಸೂರು ಡಿವಿಜ್ ಅಫಿಷಿಯೇಟಿಂಗ್ ಎಕ್ಸಿಕ್ಯೂಟಿವ್ ಇಂಜಿನಿಯರ್.
7. ಟಿ. ಎಸ್. ನಂಜಪ್ಪ, ಎಸ್ಕ್ವಯರ್, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.

ಗೈರ್ ಹಾಜರು.

8. ಎಂ. ರಾಮಸ್ವಾಮಯ್ಯ, ಎಸ್ಕ್ವಯರ್, ಬಿ. ಎ. ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್.

ನಾನ್ ಅಫಿಷಿಯಲ್ ಮೆಂಬರುಗಳು.

I. ಲೋಕಲ್ ಬೋರ್ಡು ರೂಲ್ಸ್ 8ನೆ ಪ್ಯಾರಾದ (d) ಕ್ಲಾಸ್ ಮೇರೆ—

ಹಾಜರು.

9. ಮಿ|| ಲಿಂಗೇಗೌಡರು, ಮೈಸೂರು.
10. ,, ಉಂಡವಾಡಿ ನರಸಿಂಗರಾಯರು, ಹುಣಸೂರು.
11. ,, ಪದುವಕೋಟಿ ಸುಬ್ಬರಾಯರು, ಹೆಗ್ಗಡದೇವನಕೋಟೆ.
12. ,, ಗುರುಕಾರ್ ನಂಜಪ್ಪನವರು, ಗುಂಡ್ಲುಪೇಟೆ.
13. ,, ಶಾಮೈಯ್ಯಂಗಾರ್ರು, ಚಾಮರಾಜನಗರ.
14. ,, ಟಿ. ಎಸ್. ಕೃಷ್ಣರಾಯರು, ನಂಜನಗೂಡು.
15. ,, ಬಿ. ನರಸಿಂಗರಾಯರು, ಶ್ರೀರಂಗಪಟ್ಟಣ.
16. ,, ಶಂಕರಯ್ಯನವರು, ಮುಳವಳ್ಳಿ.
17. ,, ಚಂದ್ರಶೇಖರೈಯ್ಯನವರು, ನಾಗಮಂಗಲ.
18. ,, ಎಂ. ಜಿ. ಶಾಮೈಯ್ಯಂಗಾರ್ರು, ಫ್ರೆಂಚ್‌ರಾಕ್ಸ್.
19. ,, ಗಂಜಾಂ ವೆಂಕಟರವಣಶೆಟ್ಟರು, ಟಿ. ನರಸೀಪುರ.
20. ,, ಕೃಷ್ಣಶಾಸ್ತ್ರಿಗಳು, ಕೃಷ್ಣರಾಜಪೇಟೆ.

ಗೈರ್ ಹಾಜರ್.

21. ,, ಬಸರಾಳ್ ಲಿಂಗಯ್ಯನವರು, ಮಂಡ್ಯ.
22. ಖಾಲಿ ಎಜತೊರೆ.

ಹಾಜರು.

II. ಲೋಕಲ್ ಬೋರ್ಡು ರೂಲ್ಸ್ 8ನೆ ಪ್ಯಾರಾದ (e) ಕ್ಲಾಸ್ ಮೇರೆ—

23. ಮಿ|| ವಿ. ರಾಘವಾಚಾರ್ರು, ಅಡ್ವೋಕೇಟ್, ಮೈಸೂರು.
24. ,, ಬಳೆ ಬಸವಂಣನವರು, ಜಮೀನ್‌ದಾರ್ರು, ಮೈಸೂರು.
25. ,, ಅಂಬಳೆ ಅಂಜೈಯ್ಯಪಡಿತರು, ಮೈಸೂರು.
26. ,, ಹಾರ್ನಹಳ್ಳಿ ಚಿಕ್ಕಸುಬ್ಬರಾಯರು, ಹುಣಸೂರು.
27. ,, ವೆಂಕಟಶಾಮೈಯ್ಯನವರು, ಚಾಮರಾಜನಗರ.
28. ,, ಕೃಷ್ಣಮಾಚಾರ್ಯರು, ಅಹೋಬಲಮಠದ ಏಜಂಟರು, ಟಿ. ನರಸೀಪುರ ತಾಲ್ಲೂಕು.
29. ,, ಟಿ. ಎಸ್. ವಿಸ್ಕಮೊಲುದ್ದೀನ್ ಅಲ್ಲೀಖಾನ್ ಸಾಹೇಬರು, ಅರಮನೆ ಮುಸಾಹೇಬ್, ಮೈಸೂರು.
30. ,, ರೆವರೆಂಡ್ ಡಿ. ಎಫ್. ಲಾರೆಂಟ್ ಸಾಹೇಬರು, ಕ್ಯಾತಲಿಕ್ ಪ್ರೀಸ್ಟ್, ಗಂಜಾಂ.

ಟಿ. ನರಸೀಪುರ, ಮುಳವಳ್ಳಿ ತಾಲ್ಲೂಕುಗಳ ಅವಲ್ದಾರ್ರುಗಳು ಹೊರ್ತು ಬಾಕೀ ತಾಲ್ಲೂಕುಗಳ ಅವಲ್ದಾರ್ರುಗಳೆಲ್ಲರೂ ಹಾಜರಿದ್ದರು.

I. ಕೆಳಗೆ ಉದಹರಿಸಿರುವ ಗವರ್ನ್‌ಮೆಂಟ್ ಪ್ರೊಸೀಡಿಂಗ್ಸುಗಳನ್ನು ಓದಿ ರಿಕಾರ್ಡು ಮಾಡಲಾಯಿತು.

(1) ಮಿಸಾವೈಫ ಗಳಿಗೆ ಮಾಹೆಯಾನಾ 15 ರೂಪಾಯಿನಂತೆ ತಲಬು ನಿಷ್ಕರ್ಷೆಯಾದ ಸಾದರಾಗಿರುವ 1909ನೆ ಇಸವಿ ಜೂನ್ 21ನೆ ಮಾರ್ಚಂಗವರ್ನ್‌ಮೆಂಟು ಹುಕುಂ ನಂಬರು 12819-29—ಎಲ್. ಬಿ. 55-93.

(2) ಬೋರ್ಡಿನವರ ಅಭಿಪ್ರಾಯದಂತೆ ವೇಲುಕೋಟೆಯಲ್ಲಿ ಲೋಕಲ್ ಫಂಡ್ ಡಿಸ್ಪೆನ್ಸರಿ ಇಡಲು ಹಣ ಬದಗುವ ವರಿಗೂ ಬಪ್ಪುವದಕ್ಕಾಗುವದಿಲ್ಲವೆಂದು ಸಾದರಾಗಿರುವ 1909ನೆ ಇಸವಿ ಜುಲೈ 9ನೆ ಮುಕ್ತಂ ಗವರ್ನ್‌ಮೆಂಟ್ ಹುಕುಂ ನಂಬರು 322-4—ಮೆಡಿ/162—08-8.

(3) ಹುಣಸೂರು ತಾಲ್ಲೂಕು ಗಾವಡಗೆರೆಯಲ್ಲಿ ಡಿಸ್ಪೆನ್ಸರಿ ಬೋರ್ಡಿನವರ ಅಭಿಪ್ರಾಯದಂತೆ ಪ್ರತಿ ವಾರವೂ ಸಂತೆ ನಡೆಯಲು ಮುಂಜಾರ್ಮಾಡಲಾರದ್ದೆಂದು ಸಾದರಾಗಿರುವ 1909ನೆ ಜುಲೈ 10ನೆ ಮುಕ್ತಂ ಗವರ್ನ್‌ಮೆಂಟ್ ಹುಕುಂ ನಂಬರು 352-4—ಲೋ. ಬೋ. 4-7-08-2.

(4) ಮಂಡ್ಯ ತಾಲ್ಲೂಕು ಬಸರಾಳು ಗ್ರಾಮದಲ್ಲಿ ಒಬ್ಬ ನೇಟೀವ್ ಪಂಡಿತನನ್ನು ಇಡಲು ಡಿಸ್ಪೆನ್ಸರಿ ಬೋರ್ಡಿನವರ ಅಭಿಪ್ರಾಯವನ್ನು ಮುಂಜಾರ್ಮಾಡಲು ಆಗಲಾರದೆಂದು ಸಾದರಾಗಿರುವ 1909ನೆ ಜುಲೈ 12ನೆ ಮುಕ್ತಂ ಗವರ್ನ್‌ಮೆಂಟು ಹುಕುಂ ನಂಬರು 428—ಮೆಡಿ. 263-08-2.

(5) ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ದನಗಳ ಪ್ರದರ್ಶನ ಕಾಲದಲ್ಲಿ ದನಗಳ ರಖುಮ್ಮಾರು ಮತ್ತು ಬಹು ಮಾನದ ಸ್ಕೌಲನ್ನು ತಿದ್ದುಪಡಿಮಾಡಿ ಸಾದರಾಗಿರುವ 1909ನೆ ಜುಲೈ 4ನೆ ಮುಕ್ತಂ ಗವರ್ನ್‌ಮೆಂಟು ಹುಕುಂ ನಂಬರು 511-3—ಲೋ. ಬೋ. 347-08-4.

(6) ಟಿ. ನರಸೀಪುರ ತಾಲ್ಲೂಕು ಬನ್ನೂರು ಗ್ರಾಮದಲ್ಲಿ ಡಿಸ್ಪೆನ್ಸರಿ ಬೋರ್ಡಿನವರ ಅಭಿಪ್ರಾಯದಂತೆ ಬಬ್ಬಳು ಮಿಡ್ವೈಫನ್ನು ಇಟ್ಟುಕೊಳ್ಳುವದಕ್ಕೆ ಮುಂಜಾರ್ಮಾಡಲು ಆಗುವದಿಲ್ಲವೆಂದು ಸಾದರಾಗಿರುವ 1909ನೆ ಜುಲೈ 20ನೆ ಮುಕ್ತಂ ಗವರ್ನ್‌ಮೆಂಟು ಹುಕುಂ ನಂಬರು 748-9—ಮೆಡಿ. 274-08-2.

II. ಮೈಸೂರು ಡಿಸ್ಪೆನ್ಸರಿ ಆಫೀಸ್ ಲೋಕಲ್ ಫಂಡು ಬ್ಯಾಂಚಿಗೆ ಟೈಪ್ ರೈಟರ್ ಮೆಷೀನನ್ನು ಕೊಂಡುಕೊಳ್ಳಲು ಡಿಸ್ಪೆನ್ಸರಿ ಬೋರ್ಡಿನವರು ಅಭಿಪ್ರಾಯಪಡುತ್ತಾರೆಯೇ ಎಂದು ಗವರ್ನ್‌ಮೆಂಟಿನಿಂದ ಸಾದರಾದ 1909ನೆ ಮಾರ್ಚಿ 5ನೆ ಮುಕ್ತಂ 8662—ಲೋ. ಬೋ. 255-08-4ನೆ ನಂಬರು ಡಾಕೆಟ್ ಓದಲಾಯಿತು.

ಟೈಪ್ ರೈಟರ್ ಮೇಷಿನ್ ಅತ್ಯವಶ್ಯಕವಾದ್ದರಿಂದ ಅದರ ಖರ್ಚನ್ನು ಬೋರ್ಡಿನವರು ವಹಿಸುವಂತೆ ತೀರ್ಮಾನವಾಯಿತು.

III. ಹುಚ್ಚು ಹಿಡಿದ ಪ್ರಾಣಿಗಳಿಂದ ಕಚ್ಚಲ್ಪಟ್ಟ ಬಡವರನ್ನು ಕೂನೂರುನಲ್ಲಿರುವ ಪ್ಯಾಸ್ಟರ್ ಇನ್‌ಸ್ಟಿಟ್ಯೂಟಿಗೆ ಕಳುಹಿಸಲು ತಗಲುವ ಖರ್ಚನ್ನು ಬೋರ್ಡಿನವರು ವಹಿಸುತ್ತಾರೆಯೇ? ಅದನ್ನು ತಿಳಿಸಬೇಕೆಂದು ಗವರ್ನ್‌ಮೆಂಟಿನಿಂದ ಸಾದರಾಗಿರುವ 1909ನೆ ಜೂನ್ 10ನೆ ಮುಕ್ತಂ 12402-12—ಮೆಡಿ. 2-08ನೆ ನಂಬರು ಆರ್ಡರ್ ಓದಿದ್ದರಮೇಲೆ ಸದರೀ ಖರ್ಚನ್ನು ಬೋರ್ಡಿನವರು ವಹಿಸುವಂತೆ ತೀರ್ಮಾನವಾಯಿತು.

IV. ಹುಣಸೂರು-ಎಡತೊರೆ ರಸ್ತೆ ರಿಪೇರಿ ಕಾಮಗಾರಿ ಬಗ್ಗೆ 1,053 ರೂಪಾಯಿಗೆ ಅಂದಾಜು ತಯಾರಾಗಿ ಕಳುಹಿಸಿರುವ ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನೀಯರ್‌ರವರ 1909ನೆ ಜುಲೈ 30ನೆ ಮುಕ್ತಂ 867ನೆ ನಂಬರು ಡಾಕೆಟ್ ಓದಲಾಯಿತು.

ಅಂದಾಜು ಮುಂಜೂರು ಮಾಡಲಾಯಿತು.

V. ಚಾಮುಂಡೀ ಬೆಟ್ಟದ ರಸ್ತೆ ಪಕ್ಕದಲ್ಲಿರುವ ಕುರುಬಾರಹಳ್ಳಿ ಕೆರೆ ಏರಿಯನ್ನು ಎತ್ತರಿಸಲು 1,938 ರೂಪಾಯಿಗೆ ತಯಾರಾದ ಅಂದಾಜಾದಂತೆ ಬೋರ್ಡಿನವರು ಫಂಡಿನಿಂದ ಗ್ರಾಂಟು ಕೊಡಲು ಆಗುತ್ತದೆಯೇ ಎಂದು ಕೆಳಿರುವ ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನೀಯರ್‌ರವರ 1909ನೆ ಆಗಸ್ಟ್ 7ನೆ ಮುಕ್ತಂ 894ನೆ ನಂಬರು ಡಾಕೆಟ್ ಓದಲಾಯಿತು.

ಸದರೀ ಖರ್ಚಿನ ಯಾವ ಭಾಗವನ್ನು ಬೋರ್ಡಿನವರು ವಹಿಸಲಾಗಲಾರದೆಂದು ತೀರ್ಮಾನವಾಯಿತು.

VI. ಮೈಸೂರು ತಾಲ್ಲೂಕು ಚಟ್ನಹಳ್ಳಿಗೂ ಹೆಗ್ಗಡದೇವನಕೋಟೆ ತಾಲ್ಲೂಕು ಭೀಮನಹಳ್ಳಿಗೂ ಬಂಡಿದಾರಿ ತಯಾರಾಗಬೇಕೆಂದು ಡಿಸ್ಪೆನ್ಸರಿ ಫಾರೆಸ್ಟ್ಸ್ ಆಫಿಸರವರ 1909ನೆ ಆಗಸ್ಟು 3ನೆ ಮುಕ್ತಂ 115ನೆ ನಂಬರು ಡಾಕೆಟ್ ಓದಲಾಯಿತು.

ಡಿಸ್ಪೆನ್ಸರಿ ಫಾರೆಸ್ಟ್ಸ್ ಆಫಿಸರವರು ಅಂದಾಜು ಪಟ್ಟಿ ತಯಾರುಮಾಡಿ ಬೋರ್ಡಿನವರ ಆಲೋಚನೆಗೆ ಕಳುಹಿಸಬೇಕೆಂದು ತೀರ್ಮಾನವಾಯಿತು.

VII. ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ಬಂದು ರೆಸ್ಟ್‌ಹೌಸ್ ತಯಾರೀ ಬಗ್ಗೆ ತಗಲುವ ಖರ್ಚಿನ ವಿಷಯವಾಗಿ 1909ನೆ ಮೇ 25ನೆ ಮುಕ್ತಂನ ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರವರ 286ನೆ ನಂಬರು ಯಾದಿ ಓದಲಾಯಿತು.

ಅಂದಾಜಾವಿನ ಅರ್ಧ ಖರ್ಚನ್ನು ಮುಜರಾಯಿ ಫಂಡಿನಿಂದ ಕೊಡಲು ಬೋರ್ಡಿನವರ ಅಭಿಪ್ರಾಯಕ್ಕೆ ಇಷ್ಟಪಟ್ಟಲ್ಲಿ ಬಾಕೀ ಅರ್ಧವೊಬಲಗನ್ನು ಬೋರ್ಡಿನವರು ಮುಂದಿನ ವರ್ಷದ ಬಜ್ಜೆಟ್ಟಿನಲ್ಲಿ ವಹಿಸುವದಾಗಿ ತೀರ್ಮಾನವಾಯಿತು.

VIII. ಕೃಷ್ಣರಾಜಪೇಟೆ ತಾಲ್ಲೂಕು ಶಿಂದಘಟ್ಟದಲ್ಲಿ ಹಕೀಂಗೆ ವಾಹೇಯಾನಾ ಅಲೋವೆನ್ಸ್ 5 ರೂಪಾಯಿನಿಂದ 10 ರೂಪಾಯಿಗೆ ಜಾಸ್ತಿ ಮಾಡಬೇಕೆಂದು ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರವರ 1909ನೆ ಮೇ 26ನೆ ಮುಕ್ತಂನ 289ನೆ ನಂಬರು ಯಾದಿ ಓದಲಾಯಿತು.

ಬೋರ್ಡಿನವರು ಅವರ ಅಭಿಪ್ರಾಯವನ್ನು ಸದ್ಯಕ್ಕೆ ಮನ್ನಾ ಮಾಡತಕ್ಕದ್ದೆಂದು ತೀರ್ಮಾನವಾಯಿತು.

IX. ಹೆಗ್ಗಡದೇವನಕೋಟೆ ತಾಲ್ಲೂಕು ಮಗ್ಗೆ ಗ್ರಾಮದಲ್ಲಿ ಒಬ್ಬ ನೇಟೀವ್ ಪಂಡಿತನನ್ನು ಇಡಲು ಶಿಫಾರಸ್ಸಾಗಿ ಬಂದ 1909ನೆ ಮೇ 10ನೆ ಮುಕ್ತಂನ ಹೆಗ್ಗಡದೇವನಕೋಟೆ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಓದಲಾಯಿತು,

ಹಣ ಸಾಲದ್ದರಿಂದ ಶಿಫಾರಸ್ಸಿಗೆ ಅವಕಾಶವಿಲ್ಲವೆಂದು ತೀರ್ಮಾನವಾಯಿತು.

X. ಯಡತೊರೆ ತಾಲ್ಲೂಕು ಮಿರಲೆ ಗ್ರಾಮದಲ್ಲಿರುವ ಕೆರೆಯನ್ನು ಡಿಸ್ಪೆನ್ಸರಿ ಬೋರ್ಡಿನವರು ಕೇರಿಸಿಕೊಳ್ಳಬೇಕೆಂಬ ಮೈಸೂರು ಸಬ್ ಡಿವಿಜ್ ಆಫಿಸರವರ 1909ನೆ ಮೇ 31ನೆ ಮುಕ್ತಂನ 263ನೆ ನಂಬರು ಯಾದಿ ಓದಲಾಯಿತು.

ಬೋರ್ಡಿನವರು ಕೆರೆಯನ್ನು ಸುಘರ್ದು ತೆಗದುಕೊಳ್ಳುವಂತೆ ತೀರ್ಮಾನವಾಯಿತು.

XI. ಯಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ಬಬ್ಬು ಹಕೀಂನನ್ನು ಇಡಬೇಕೆಂಬ ಮೈಸೂರು ಸಬ್ ಡಿವಿಜ್ ಆಫಿಸರವರ 1909ನೆ ಮೇ 1ನೆ ಮುಕ್ಕುಂನ 1035ನೆ ನಂಬರು ಯಾದಿ ಓದಲಾಯಿತು.

ಚುಂಚನಕಟ್ಟೆಯು ಸುತ್ತಮುತ್ತ ಗ್ರಾಮಗಳು ಬಹಳ ಅನಾರೋಗ್ಯಸ್ಥಿತಿಯಲ್ಲಿರುವದ್ದರಿಂದ ಅಲ್ಲಿ ಬಬ್ಬು ಹಕೀಂನನ್ನು ಇಟ್ಟುಕೊಳ್ಳುವಂತೆಯು ಹಕೀಂನ ಅಲೋವೆನ್ಸ್ ಮಾಹೆಯಾನಾ 15 ರೂಪಾಯಿನಂತೆ ನಿಷ್ಕರ್ಷೆಮಾಡಿ ಮುಜರಾಯಿ ಡಿಪಾರ್ಟುಮೆಂಟಿನವರು 5 ರೂಪಾಯಿ ಕೊಡಲು ಇಷ್ಟಪಟ್ಟಲ್ಲಿ ಬೋರ್ಡಿನವರು 10 ರೂಪಾಯಿ ಕೊಡುವದಾಗಿಯೂ ತೀರ್ಮಾನವಾಯಿತು.

XII. ಶ್ರೀರಂಗಪಟ್ಟಣದ ಆಸ್ಪತ್ರೆ ಕಟ್ಟಡವನ್ನು ಬಡಾವಣೆ ಮಾಡಲು 1909ನೆ ಆಗಸ್ಟ್ 7ನೆ ಮುಕ್ಕುಂನ ಮಿ|| ಬಿ. ನರಸಿಂಗರಾಯರ ಅಭಿಪ್ರಾಯ ಓದಲಾಯಿತು.

ಹಾಲಿ ಕಟ್ಟಡವು ಸಾಕಾಗುವದಿಲ್ಲವೆಂದು ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರವರು ತಿಳಿಯಪಡಿಸಿದರ ಮೇಲೆ ಅವರಅಭಿಪ್ರಾಯದಂತೆ ಬಂಡು ವರಾಂಡವೂ ಎರಡು ಕೊಠಡಿಗಳೂ ಸಹಾ ಜಾಸ್ತಿ ಮಾಡಲು ತೀರ್ಮಾನವಾಯಿತು. ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರವರು ಅಂದಾಜು ಮತ್ತು ನಕ್ಷೆಯನ್ನು ಎಗ್ಜಿಕ್ಯೂಟಿವ್ ಇಂಜನೀಯರ್‌ರವರಿಂದಲೇ ತಯಾರ್ಮಾಡಿಸಲು ಬಿಪ್ಪಿರುತ್ತಾರೆ.

XIII. ಮಂಡ್ಯ ತಾಲ್ಲೂಕು ಲಿಂಗರಾಜ ಛತ್ರದ ಭಾವಿ ಕಾವುಗಾರಿಗೆ ಕಲ್ಲುಗಳನ್ನು ಉಪಯೋಗಿಸಿದ ಕಂಟ್ರಾಕ್ಟುದಾರನಿಗೆ ಮುವ್ವತ್ತು ರೂಪಾಯಿನ ಬಹುಮಾನಕೊಡಲು ಶಿಫಾರಸ್ಸುಮಾಡಿರುವ 1909ನೆ ಆಗಸ್ಟ್ ಮಾಹೆಯ ಮಂಡ್ಯ ತಾಲ್ಲೂಕು ಬೋರ್ಡಿನವರ ತೀರ್ಮಾನ ಓದಲಾಯಿತು.

ಶಿಫಾರಸ್ಸು ಮಂಜೂರ್ಮಾಡತಕ್ಕದ್ದೆಂದು ತೀರ್ಮಾನವಾಯಿತು.

XIV. ಮಂಡ್ಯ ತಾಲ್ಲೂಕು ಮದ್ದೂರು ಗ್ರಾಮದಲ್ಲಿರುವ ನೇಟಿವ್ ಪಂಡಿತನಿಗೆ ಮಾಹೆಯಾನಾ 5 ರೂಪಾಯಿನಿಂದ 10 ರೂಪಾಯಿನಂತೆ ಜಾಸ್ತಿ ಅಲೋವೆನ್ಸಿಗೆ ಶಿಫಾರಸ್ಸು ಮಾಡಿರುವ 1909ನೆ ಆಗಸ್ಟ್ ಮಾಹೆ ಬಾಬತು ಮಂಡ್ಯ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಓದಲಾಯಿತು.

ಶಿಫಾರಸ್ಸಿನಂತೆ ಜಾಸ್ತಿ ಅಲೋವೆನ್ಸ್ 1910ನೆ ಜುಲೈ 1 ರಿಂದ ಮಂಜೂರ್ಮಾಡತಕ್ಕದ್ದೆಂದು ತೀರ್ಮಾನವಾಯಿತು.

XV. ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದಲ್ಲಿ ಮುಸಾಫರ್ ಬಂಗ್ಲೆ ರಿಪೇರಿ ಬಗ್ಗೆ 650 ರೂಪಾಯಿನ ಅಂದಾಜಾವನ್ನು ಓದಲಾಯಿತು.

ಅಂದಾಜು ಸ್ಯಾಂಕ್ಷನ್ ಮಾಡತಕ್ಕದ್ದೆಂದು ತೀರ್ಮಾನವಾಯಿತು.

XVI. ಕಳೆದಸಾಲಿನಲ್ಲಿ ನೀರುಕಲಾವಾಗಿ ನಿಂತು ಚಾಲ್ತಿಸಾಲಿನಲ್ಲಿ ರೆವಿನ್ಯೂ ಡಿಪಾರ್ಟುಮೆಂಟಿನವರಿಂದ ನಡಿಯಬೇಕಾದ ಕಾವುಗಾರಿಗಳ ಪಟ್ಟಿಯನ್ನು ಓದಲಾಯಿತು.

ಕಾವುಗಾರಿಗಳನ್ನು ಪೂರೈಸಬೇಕೆಂತಲೂ ಸದರೀ ಕಾವುಗಾರಿಗೆಗೆ ತಕ್ಕ ಫಂಡನ್ನು ಮಂಜೂರ್ಮಾಡಲು ಗವರ್ನಮೆಂಟಿನವರ ಅಪ್ಪಣೆಯನ್ನು ಪಡೆಯಬೇಕೆಂತಲೂ ತೀರ್ಮಾನವಾಯಿತು.

XVII. ಮಲಪ್ರಭಾ ಲೀಸ್ಯಿನಲ್ಲಿ ಕಂಡ ಅಂದಾಜಾಗಳನ್ನು ಸಮ್ಮಂಧಪಟ್ಟ ತಾಲ್ಲೂಕು ಬೋರ್ಡಿನವರ ಒಪ್ಪಿಗೆಯಂತೆ ಮಂಜೂರು ಮಾಡಲಾಯಿತು.

XVIII. 1909ನೆ ಫೆಬ್ರುವರಿ 18ರ ಲಾಗಾಯಿತು ಚಾಲ್ತೀ ವರಿಗಿನ ತಾಲ್ಲೂಕು ಬೋರ್ಡಿನವರ ಪ್ರೊಸೀಡಿಂಗ್ಸ್‌ಗಳನ್ನು ಓದಿ ರಿಕಾರ್ಡು ಮಾಡಲಾಯಿತು.

XIX. 1909ನೆ ಇಸವಿ ದಸರಾ ರಿಪ್ರಸೆಂಟೇಟಿವ್ ಸಮಾಜಕ್ಕೆ ಮೆಸ್ಸರ್ಸ್|| ಅಂಬಳಿ ಅಣ್ಣೈಯ್ಯ ಪಂಡಿತರು, ಲಿಂಗೇಗವ್ವೆಡರುಸಹಾ ಚುನಾಯಿಸಲ್ಪಟ್ಟರು.

XX. 1909ನೆ ಇಸವಿ ಡಿಸೆಂಬರು 11ನೆ ಶನಿವಾರ ಮಧ್ಯಾಹ್ನ 2 ಘಂಟೆಗೆ ಬರುವ ಮಿಟಿಂಗನ್ನು ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಕೆ. ಚಾಂಡಿ,
ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟು.

1909ನೆ ಇಸವಿ ಆಗಸ್ಟು ಮಾಹೆ 9ನೆ ತಾರೀಖಿನಲ್ಲಿ ನಡದ ಹಾಸನ ಡಿಸ್ಟ್ರಿಕ್ಟು ಬೋರ್ಡು ಮಿಟಿಂಗ್ ಪ್ರೊಸೀಡಿಂಗ್ಸ್.

ಹಾಜರು.

ಪಿ. ಆರ್. ಡಬ್ಲ್ಯೂ. ವೆದರಾಲ್, ಎಸ್‌ಕ್ವಯರ್, ಪ್ರೆಸಿಡೆಂಟ್.
ನರಸಿಂಗರಾವ್ ಪೂರ್ಣಯ್ಯ, ಎಸ್‌ಕ್ವಯರ್, ಬಿ.ಎ., ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮತ್ತು ವೈಸ್ ಪ್ರೆಸಿಡೆಂಟ್.
ಸಿ. ದೇವರಾಜ ಅರಸ್, ಎಸ್‌ಕ್ವಯರ್, ಜನರಲ್ ಅಸಿಸ್ಟೆಂಟ್ ಕಮಿಷನರವರು.
ಎ. ಕೃಷ್ಣಸ್ವಾಮಿ ಐಯ್ಯಂಗಾರ್, ಎಸ್‌ಕ್ವಯರ್, ಬಿ.ಎ., ಅಸಿಸ್ಟೆಂಟ್ ಕಮಿಷನರವರು, ಸಕಲೇಶಪುರ.
ವಿ. ಅಯ್ಯಾಸ್ವಾಮಿ ಅಯ್ಯರ್, ಎಸ್‌ಕ್ವಯರ್, ಬಿ.ಎ., ಬಿ.ಸಿ.ಇ., ಹಾಸನ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರವರು
ಸಿ. ರಾಜಾರಾಮರಾವ್, ಎಸ್‌ಕ್ವಯರ್, ಎಲ್.ಎಂ.ಎಸ್., ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
ಎಂ. ಕೆ. ತಿರುಮಲಾಚಾರ್ಯರು, ಎಸ್‌ಕ್ವಯರ್, ಬಿ.ಎ., ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರವರು, ಹಾಸನ ಡಿಸ್ಟ್ರಿಕ್ಟು.

ನಾರ್ ಅಫಿಷಿಯಲ್ ಮೆಂಬರುಗಳು.

ಮಿ॥ ಲಕ್ಷ್ಮೀನರಸಿಹ್ಮಾಚಾರ್ಯರು, ಹಾಸನ.
,, ಕೇಣಿ ಮಹದೇವಪ್ಪನವರು, ಹಾಸನ.
,, ಡಬ್ಲ್ಯ್ಯು. ಎಲ್. ಕಾಫರ್ಡ್ ಸಾಹೇಬರು, ಮಂಜರಾಬಾದ್.
,, ಪುಟ್ಟೇಗೌಡ ಉರುಫ್ ನಂಜೇಗೌಡರು, ಮಂಜರಾಬಾದು.
,, ಕ. ತಮ್ಮಯ್ಯನವರು, ಬೇಲೂರು.
,, ಹಬೀಬುಲ್ಲಾಸಾಬರು, ಬೇಲೂರು.
,, ಹ. ದಾಸಪ್ಪನವರು, ಅರಸೀಕೆರೆ.
,, ಕೆಂಚರಾಯಶೆಟ್ಟರು, ಅರಸೀಕೆರೆ.
,, ಧರಣೈಯ್ಯಶೆಟ್ಟರು, ಚನ್ನರಾಯಪಟ್ಟಣ.
,, ನಂಜುಂಡನವರು, ಚನ್ನರಾಯಪಟ್ಟಣ.
,, ವೆಂಕಟರಾವ್ಯೆಯ್ಯನವರು, ಹೊಳೇನರಸೀಪುರ.
,, ಸೂರ್ಯನಾರಾಯಣಶೆಟ್ಟರು, ಅರಕಲಗೂಡು.
,, ಅಬ್ದುಲ್ಲಾಸಾಬರು, ಅರಕಲಗೂಡು.
,, ಮಹಲಿಂಗೆಗೌಡರು, ಅರಕಲಗೂಡು.

ಗೈರ್ ಹಾಜರು

,, ಕೊ. ರಾಮುಶೆಟ್ಟರು, ಹೊಳೇನರಶೀಪುರ.
,, ತಿರುನಾರಣೈಯ್ಯಂಗಾರ್ಯರು, ಚನ್ನರಾಯಪಟ್ಟಣ.

ಅರಕಲಗೂಡು ತಾಲ್ಲೂಕು ಅಮಲ್ದಾರ್ರು ಹೊತ್ತು ಬಾಕಿ ಅಮಲ್ದಾರ್ರುಗಳು ಜೆ॥ ಅಮಲ್ದಾರ್ರು ಸಹಾ ಬಂದಿದ್ದರು.

I. 1909ನೆ ಸಾಲ್ ದಸರಾ ಕ್ಯಾಲೆಂಡರ್ ಓದಲಾಯಿತು. ಮೈಸೂರಿನಲ್ಲಿ ನಡಿಯಬೇಕಾಗಿರುವ ದಸರಾ ಪ್ರಜಾಪ್ರತಿನಿಧಿ ಸಭೆಗೆ ಈ ಡಿಸ್ಟ್ರಿಕ್ಟ್ ಬೋರ್ಡಿನ ಪರವಾಗಿ ಇಬ್ಬರು ನಾರ್ ಅಫಿಷಿಯಲ್ ಮೆಂಬರುಗಳನ್ನು ಚುನಾವಣೆಮಾಡಿದ್ದು.

ತೀರ್ಮಾನ—ಹಾಲಿ ಕ್ರಮವಾಗಿ ಚುನಾಯಿಸಲ್ಪಟ್ಟಿದ್ದರಲ್ಲಿ ಮಿ॥ ರಾ॥ ಕ. ತಮ್ಮಯ್ಯನವರು ಮತ್ತು ಸೂರ್ಯನಾರಾಯಣ ಶೆಟ್ಟರು ಈ ಬೋರ್ಡಿನ ಪರವಾಗಿ ಬರುವ ದಸರಾ ಸಭೆಗೆ ಹೋಗತಕ್ಕದ್ದೆಂದು ತೀರ್ಮಾನಿಸಲಾಯಿತು.

II. ಹುಚ್ಚನಾಯಿ ಮುಂತಾದ ಮೃಗಗಳಿಂದ ಕಡಿಯಲ್ಪಟ್ಟವರನ್ನು ಇಲಾಜು ಬಗ್ಗೆ ಕೂನೂರಿಗೆ ಕಳುಹಿಸಲು ತಗಲುವ ಖರ್ಚಿಗೋಡನ್ನು ಇಂಥಾವರು ಮ್ಯುನಿಸಿಪಾಲಿಟಿಗಳಲ್ಲಿದ್ದರೆ, ಮ್ಯುನಿಸಿಪಾಲಿಟಿ ಹಣದಿಂದಲೂ, ಬೇರೆ ಕಡೆಗಳಲ್ಲಿ ಇದ್ದರೆ, ಡಿಸ್ಟ್ರಿಕ್ಟ್ ಫಂಡ್ಸಿನಿಂದಲೂ ಕೊಡತಕ್ಕ ವಿಚಾರದಲ್ಲಿ ಸದರಿ ಬೋರ್ಡುಗಳ ಅಭಿಪ್ರಾಯವನ್ನೊಂದಿಗೆ ಜವಾಬು ಬೆಳಿಸಬೇಕೆಂತ ಮೈಸೂರು ಗವರ್ನಮೆಂಟು ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರಿಂದ ತಲ್ಪಿದ 10—6—09ರ ಮುಕ್ಕಾಂ 12402-12—ಮೈ. 2-08ನೆ ನಂಬರು ಲೆಟರ್ ಓದಲಾಯಿತು.

ಇದೇ ವಿಚಾರದಲ್ಲಿ ಹಾಸನ ಮ್ಯುನಿಸಿಪಲ್ ಕೌನ್ಸಿಲಿನ 30-7-09ರ ಮುಕ್ಕಾಂ IIIನೆ ನಂಬರು ತೀರ್ಮಾನವನ್ನು ಓದಲಾಯಿತು.

ತೀರ್ಮಾನ—ಕೂನೂರಿಗೆ ಇಲಾಜು ಬಗ್ಗೆ ಕಳುಹಿಸಲ್ಪಡುವ ಪ್ರತಿಯೊಬ್ಬ ಖಾಯಿಲೆಯವನಿಗೂ ಮತ್ತು ಇವನ ಶಿಕ್ಷೆಯವನ ಖರ್ಚಿಗಾಗಬಹುದೆಂಬದನ್ನು ತಿಳಿಸಬೇಕೆಂತ ಮ್ಯುನಿಸಿಪಲ್ ಕೌನ್ಸಿಲರವರು ಅಭಿಪ್ರಾಯಪಟ್ಟರು ವಂತೆ ಗವರ್ನಮೆಂಟಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

III. ಅರಸೀಕೆರೆಯಲ್ಲಿ ನೀರಿನ ಸರಬರಾಯಿಗೋಸ್ಕರ ತಗಿಯಲ್ಪಟ್ಟ ಎರಡು ಭಾವಿಗಳಿಗೆ 10,625 ರೂಪಾಯಿ ಲಾಗವಡು ತಗಲಿರುವದಾಗಿಯೂ ಈ ಖೊಬಲಗನ್ನು ಅರಸೀಕೆರೆ ಮ್ಯುನಿಸಿಪಾಲಿಟಿಯ ಕ್ಲೋಸಿಂಗ್ ಬ್ಯಾಲೆನ್ಸು ಪೈಕಿ ಕೊಡತಕ್ಕದ್ದೆಂತಲೂ ಆದರೆ, ಸದರಿ ಭಾವಿ ತೆಗಿಸತಕ್ಕ ಬಗ್ಗೆ ರೆವಿನ್ಯೂ ಕಮಿಷನರ್ ಸಾಹೇಬರವರಿಂದ ಕೊಡಲ್ಪಟ್ಟ 2,785 ರೂಪಾಯಿಗಳನ್ನು ಅರಸೀಕೆರೆ ಮ್ಯುನಿಸಿಪಾಲಿಟಿಗೆ ಜವಾಬು ಕೊಡಬೇಕಾಗಿ ಕಂಟ್ರೋಲರ್ ಸಾಹೇಬರವರಿಗೆ ತಿಳಿಸಿರುವದರಿಂದ ಬಾಕಿ ಉಳಿಯುವ 7,840 ರೂಪಾಯಿಗಳನ್ನು ಮ್ಯುನಿಸಿಪಾಲಿಟಿಗೂ ಮತ್ತು ಡಿಸ್ಟ್ರಿಕ್ಟ್ ಬೋರ್ಡಿಗೂ ಸಹಾ ಹಂಚುವದು ಯುಕ್ತವಾಗಿ ಕಾಣುತ್ತೆಯಾಗಿ ಈ ವಿಚಾರವನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಚರ್ಚಿಸಿ ಬೋರ್ಡಿನ ತೀರ್ಮಾನ ನಿಜ ಡಿಸ್ಟ್ರಿಕ್ಟ್ ಫಂಡ್ಸಿನಿಂದ ಕೊಡಬೇಕಾಗುವ 3,920 ರೂಪಾಯಿಗಳನ್ನು ಯಾವ ಹೆಡ್ಡಿನಿಂದ ಖರ್ಚು ಹಾಕಬಹುದೆಂಬ ಬಗ್ಗೆ ರಿಪೋರ್ಟು ಅಪೇಕ್ಷಿಸಿ ಬಂದ 24-6-09ರ ಮುಕ್ಕಾಂ 12982-4—ಮ್ಯೂ. 182-08-9ನೆ ನಂಬರು ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ—ಅರ್ಧ ಲಾಗೋಡೆಂದರೆ 3,920 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಫಂಡ್ಸಿಗೆ ಸ್ಪೆಷಲ್ ಡಿಸ್ಟ್ರಿಬ್ಯೂಷನ್ ತರೀಕು ಕೊಡಲ್ಪಟ್ಟ ಖೊಬಲಗು ಪೈಕಿ ಉಪಯೋಗಿಸಲ್ಪಡದೆ ಇರುವ 4,208 ರೂಪಾಯಿಗಳಲ್ಲಿ ಮೇಲ್ಕಂಡ ಖೊಬಲಗನ್ನು ಕೊಡಬಹುದೆಂತ ತೀರ್ಮಾನಿಸಲಾಯಿತು.

IV. ಈ ಡಿಸ್ಟ್ರಿಕ್ಟುಗಳಲ್ಲಿರತಕ್ಕ ಡಿಸ್ಟ್ರಿಕ್ಟ್ ಫಂಡ್ ಬಾಬತು ಟೋಲ್ ಗೇಟುಗಳಲ್ಲಿ ಸುಂಕ ವಸೂಲ್ಮಾಡತಕ್ಕ ಹಕ್ಕನ್ನು ಪ್ರತಿವರುಷವು ಹರಾಜು ಮಾಡಿಸುವದಕ್ಕೆ ಬದಲಾಗಿ ಅಜಮಾಯಿಷಿ ತರೀಕ್ 2 ವರ್ಷಕ್ಕೆ ಬಂದಾವರ್ತಿ ಹರಾಜು ಮಾಡಿಸಬೇಕೆಂಬದಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿದ ತಿಪಾರ್ಷಿನಂತೆ ಮಂಜೂರ್ಮಾಡಿರುವದಾಗಿಯೂ 1909—10 ಮತ್ತು 1910-11ನೆ ಸಾಲುಗಳಿಗೆ ನಡಿಯತಕ್ಕ ಹರಾಜುಗಳ ಫಲಿತಾಂಶವನ್ನು ಮತ್ತು ಸದರಿ ಟೋಲ್ಗೇಟುಗಳು ಸ್ಥಾಪಿತನಾದ ತಾರೀ

ಖು ಲಾಗಾಯಿತು ಆದ ಹುಟು ವಳಿ ತೋರಿಸತಕ್ಕ ಸ್ಟೇಟ್ಮೆಂಟು ನಿಖಿ ಜವಾಬು ಅಪೇಕ್ಷಿಸಿ ಬಂದ 17-6-09ರ ಮಕ್ರುಂ 12731-2—ಎಲ್. ಬಿ. 395-08-2ನೆ ನಂಬರ್ ಪ್ರೊಸೀಡಿಂಗ್ಸ್ ಓದಲಾಯಿತು.

ತೀರ್ಮಾನ—1909-10 ಮತ್ತು 1910-11ನೆ ಸಾಲುಗಳಿಗೆ ನಡದ ಟೋಲ್ ಗೇಟುಗಳ ಹರಾಜು ಫಲಿತಾಂಶವನ್ನು ಮೇಲೆ ಕೇರಿರುವ ತಪ್ಸೀಲ್ ಸ್ಟೇಟ್ಮೆಂಟಿನೊಂದಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

V. ಸಕಲೇಶಪುರದಲ್ಲಿ ಡಿಸ್ಪೆನ್ಸರಿಗೋಸ್ಕರ ಪ್ರತ್ಯೇಕ ಬಂದು ಕಟ್ಟಡವನ್ನು ಕಟ್ಟಿಸತಕ್ಕ ವಿಚಾರದಲ್ಲಿ ಸೀನಿಯರ್ ಸರ್ಜನ್ ಸಾಹೇಬರವರಿಂದ ಬಂದ 19—1—09ರ ಮಕ್ರುಂ ಜಿ 42 ನೆ ನಂಬರು ಲೆಟರಿನ ಕಾಪಿಯನ್ನು ಮತ್ತು ಹಾಸನದ ಎಗ್ಜಿಕ್ಯುಟಿವ್ ಇಂಜನಿಯರವರು ಸೂಪರಿಂಟೆಂಡಿಂಗ್ ಇಂಜನಿಯರವರಿಗೆ ಬರಸಿರುವ 25—5—09ರ ಮರ್ಕುಂ 388ನೆ ನಂಬರು ಡಾಕೆಟ್ ಕಾಪಿಯನ್ನು ಸಹಾ ಕಳುಹಿಸಿರುತ್ತೆಂತಲೂ ಪ್ರಸಕ್ತವಾದ ಸೀನಿಯರ್ ಸರ್ಜನ್ ಸಾಹೇಬರವರ ಲೆಟರಿನಲ್ಲಿ ನಮೂದಿರತಕ್ಕ ಕಟ್ಟಡಗಳಿಗೆಲ್ಲಾ ಡಿಸ್ಟ್ರಿಕ್ಟು ಫಂಡ್ಸು ಮತ್ತು ಮ್ಯುನಿಸಿಪಲ್ ಫಂಡ್ಸಿನಿಂದ ಕೊಡಬಹುದಾದ ಕಂಟ್ರಿಬ್ಯೂಷನ್ ಎಷ್ಟು ಮೊಬಲಗನ್ನು ಡಿ. ಪಿ. ಡಬ್ಲ್ಯೂ. ಇಲಾಖೆಗೆ ಚಾಲ್ತಿ ಸಾಲಿನಲ್ಲಿ ಕೊಡಲು ಸಾಧ್ಯವಿರುತ್ತೆಂಬುದನ್ನು ತಿಳಿಸಬೇಕಾಗಿ ತಪ್ಪಿದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಸಾಹೇಬರವರಿಂದ ತಪ್ಪಿದ 29-7-09ರ ಮರ್ಕುಂ 1·98—ಮೆ. 141-07-6ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಹಾಲಿ ನಡಿಯಬೇಕೆಂದು ಸೂಚಿಸಿರುವ ಹೊಸ ಕೆಲಸಗಳನ್ನೆಲ್ಲಾ ಪ್ರೊವಿಷನಲ್ ಫಂಡ್ಸಿನಿಂದ ಹಣ ಕೊಡಬೇಕಾಗಿಯೂ ರಿಪೇರಿಗಾಗಿ ಬೇಕಾಗಿರುವ 429 ರೂಪಾಯಿಗಳ ಪೈಕಿ $\frac{1}{3}$ ಭಾಗವನ್ನು ಅಂದರೆ 140 ರೂಪಾಯಿಗಳನ್ನು ಹಾಲ್‌ಸಾಲ್ ಡಿಸ್ಟ್ರಿಕ್ಟು ಫಂಡು ಬಡ್ಜೆಟ್ಟಿನಲ್ಲಿ "IX ಕಂಟ್ರಿಬ್ಯೂಷನ್ ಡಿಸ್ಪೆನ್ಸರಿ ರಿಪೇರಿಗಾಗಿ ದಾಖಲಾಗಿರುವ 1,000 ರೂಪಾಯಿಗಳ ಪೈಕಿ ಕೊಡಬಹುದಾಗಿ ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

VI. (1) ಗ್ರಾಮಗಳನ್ನು ಬಳ್ಳಿ ಪಾಕೀಜಾಸ್ಥಿತಿಯಲ್ಲಿಟ್ಟುಕೊಂಡಿರತಕ್ಕ ಪಟೇಲರುಗಳಿಗೆ ಇನಾಂ ಕೊಡತಕ್ಕ ವಿಚಾರದಲ್ಲಿ ಏನು ಕ್ರಮ ಜರಿಗಿರುತ್ತೆಂಬ ಬಗ್ಗೆ ರಿಪೋರ್ಟು ಅಪೇಕ್ಷಿಸಿ ತಪ್ಪಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ ಸಾಹೇಬರವರ 12-7-09ರ ಮರ್ಕುಂ 411-4—ಎಲ್. ಬಿ. 105-08ನೆ ನಂಬರು ಡಾಕೆಟ್ ಓದಲಾಯಿತು.

(2) ಈ ವಿಚಾರದಲ್ಲಿ ತಾಲ್ಲೂಕ್ ಅವುಲ್ದಾರುಗಳಿಂದ ತಲಪಿದ ರಿಪೋರ್ಟುಗಳನ್ನು ಸಹಾ ಓದಲಾಯಿತು.

ತೀರ್ಮಾನ—ಕೆಲವು ಗ್ರಾಮಗಳಲ್ಲಿ ಹೆಚ್ಚಾಗಿ ಮನೆಗಳಿದ್ದು ಇನ್ನು ಕೆಲವು ಗ್ರಾಮಗಳಲ್ಲಿ ಕಮ್ಮಿಯಾಗಿ ಮನೆಗಳಿರುವದು. ಈ ಪ್ರಕಾರ ಗ್ರಾಮ ಗ್ರಾಮಗಳಿಗೆ ವ್ಯತ್ಯಾಸವಿರುತ್ತೆಯಾಗಿ ಪ್ರಸಕ್ತವಾದ ಪದ್ಧತಿಯನ್ನು ಜಾರಿಲಿರತಕ್ಕದ್ದು ಕಷ್ಟವಾಗಿರುತ್ತೆಂತಲೂ ಆದ್ದರಿಂದ ಗ್ರಾಮಗಳನ್ನು ಅವುಗಳ ಸೈಸ್ ಅನುಸರಿಸಿ 3 ಪಂಗಡಗಳಾಗಿ ವಿಂಗಡಿಸಿ ಇವುಗಳ ಪಾಕೀಜಾ ಸ್ಥಿತಿಯನ್ನು ಕಂಡು ಕೇವಲ ಉತ್ತಮವಾಗಿರುವ ಗ್ರಾಮಗಳ ಪಟೇಲರುಗಳಿಗೆ ಇನಾಂ ಕೊಡತಕ್ಕ ಅಂಶವನ್ನು ಹಾಲ್‌ಸಾಲ್‌ನಲ್ಲಿ ಅಜಮಾಯಿಷಿ ಮಾಡತಕ್ಕ ಬಗ್ಗೆ ಗವರ್ನಮೆಂಟಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

VII. (1) ಹಾಸನ ತಾಲ್ಲೂಕ್ ಮುಗಳೂರು ದೊಡ್ಡಕೆರೆ ಸರಪಡಿಸುವದಕ್ಕೋಸ್ಕರ 8,200 ರೂಪಾಯಿಗಳಿಗೆ ತಯಾರಾದ ಪ್ರಾಜೆಕ್ಟನ್ನು ಕೌಂಟರಿ ಸಿಗ್ನೇಚರು ಬಗ್ಗೆ ಕಳುಹಿಸಿರುವದರೊಂದಿಗೆ ಸದರಿ ಕೆರೆ ಏರಿಮೇಲೆ ಬೈಲಹಳ್ಳಿಯಿಂದ ಹಾಸನಕ್ಕೆ ಹೋಗುವ ಗಾಡಿಜಾಡು ಇರುತ್ತೆಂತಲು ಸದರಿ ಕೆರೆ ರೆಸ್ಟೋರು ಆದನಂತರ ಮೇಲ್ಕಂಡ ಜಾಡನ್ನು ಸರಿಪಡಿಸುವದಕ್ಕೆ 454 ರೂಪಾಯಿಗಳು ಡಿಸ್ಟ್ರಿಕ್ಟ್ ಫಂಡ್ಸಿನಿಂದ ಕೊಡಬೇಕೆಂತಲೂ ವಗೈರೆ ಹಾಸನ ಡಿವಿಜ್ ಎಗ್ಜಿಕ್ಯುಟಿವ್ ಇಂಜನಿಯರ್ ಸಾಹೇಬರವರಿಂದ ತಪ್ಪಿದ 8-3-09ರ ಮರ್ಕುಂ 63ನೆ ನಂಬರ್ ಡಾಕೆಟ್ ಓದಲಾಯಿತು.

(2) ಸದರಿ ಗ್ರಾಮಸ್ಥರು ಈ ಕೆಲಸಕ್ಕೋಸ್ಕರ ಕಂಟ್ರಿಬ್ಯೂಷನ್ ಕೊಡಲು ಲಾಚಾರಿರುತ್ತೇವೆಂತಲೂ, ಆದರೆ ದಾರಿಯನ್ನು ಸರಿಪಡಿಸಿಕೊಡಬೇಕೆಂದು ಬೇಡುತ್ತಾರೆಂಬುದಾಗಿ ವಗೈರೆ ನಮೂದುಳ್ಳ ಹಾಸನ ತಾಲ್ಲೂಕು ಅವುಲ್ದಾರರ 3-7-09ರ ಮರ್ಕುಂ 3ನೆ ನಂಬರು ರಿಪೋರ್ಟ್ ಖೈರಾಗುಳ್ಳ ರಿಕಾರ್ಡು ಓದಲಾಯಿತು.

ತೀರ್ಮಾನ—ಏರಿಯಮೇಲೆ ಗಾಡಿಗಳು ಸಂಚರಿಸುವದಕ್ಕೆ ಸಾಕಾಗುವಷ್ಟು ಏರಿಯನ್ನು ಅಗಲವಾಡುವದಕ್ಕೋಸ್ಕರ ಬೇಕಾಗುವ ಮೊಬಲಗನ್ನು ಈ ಬೋರ್ಡಿನಿಂದ ಕೊಡಲು ಸಾಧ್ಯವಿಲ್ಲವೆಂತಲು, ಏರಿ ಕೆಳಗೆ ಇರಬೇಕಾದ 10 ಅಡಿ ರಿಜರ್ವ್ ಜಾಗಾ ಖುಲ್ಲಾ ಬಿಡಬೇಕಾಗಿ ನಿರ್ಬಂಧಪಡಿಸಿದರೆ ಏರಿ ಕೆಳಗಡೆ ಗಾಡಿಗಳು ಸಂಚರಿಸುವದಕ್ಕೆ ಸಾಕಾಗುವಷ್ಟು ಜಾಗೆ ಇರುತ್ತೆಂತ ತೀರ್ಮಾನಿಸಲಾಯಿತು.

VIII. ಅರ್ಕಲಗೂಡು ತಾಲ್ಲೂಕ್ ಬೂದನೂರು ಕೆರೆ ಏರಿಮೇಲೆ ಹೋಗತಕ್ಕ ರಸ್ತೆಯನ್ನು ಬಂದುಕಡೆ ಹೋಗುವಂತೆ ಬದಲಾಯಿಸುವ ವಿಚಾರದಲ್ಲಿ ಅಸಿಸ್ಟೆಂಟ್ ಇಂಜನಿಯರವರಿಂದ ತಪ್ಪಿದ 26-10-07ರ ಮರ್ಕುಂ 406ನೆ ನಂಬರು ಡಾಕೆಟ್ ಕಾಪಿಯನ್ನು ಕಳುಹಿಸಿರುತ್ತೆಯೆಂಬ ಹಾಸನ ಡಿವಿಜ್ ಎಗ್ಜಿಕ್ಯುಟಿವ್ ಇಂಜನಿಯರವರ 10-5-09ರ ಮರ್ಕುಂ 173ನೆ ನಂಬರು ಡಾಕೆಟ್ ಓದಲಾಯಿತು.

ತೀರ್ಮಾನ—ಇದೇ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿರುವ ತೀರ್ಮಾನದ ಕಾಪಿಯನ್ನು ಹಿಂದೆಯೆ ಎಗ್ಜಿಕ್ಯುಟಿವ್ ಇಂಜನಿಯರವರಿಗೆ ಕಳುಹಿಸಿರುತ್ತೆಯಾಗಿ ಇದನ್ನು ಪುನರಾವಲೋಕನದಿಂದ ಈ ವಿಚಾರದಲ್ಲಿ ಜಾಗ್ರತೆ ಜವಾಬು ಬೆಳಸಬೇಕಾಗಿ ಎಗ್ಜಿಕ್ಯುಟಿವ್ ಇಂಜನಿಯರವರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

IX ಗತ ಸಾಲಿನಲ್ಲಿ ರಾಮನಾಥಪುರ ಮತ್ತು ಗೊರೂರು ಕಡವುಗಳಿಗೆ ಹೊಸ ದೋಣಿಗಳನ್ನು ಸರಪರಾಜು ಮಾಡಲಾಗಲಿಲ್ಲವೆಂತಲೂ ಇದಕ್ಕಾಗಿ ಇದ್ದ 650 ರೂಪಾಯಿಗಳು ಲಾಪ್ಸಾಗಿರುತ್ತೆಯಾಗಿ ಚಾಲ್ತಿ ಸಾಲಿನಲ್ಲಿ 3 ದೋಣಿಗಳು ಮತ್ತು ಹೊಸ ಪ್ಲಾಟ್‌ಫಾರಂ ಆಗತಕ್ಕ ಬಗ್ಗೆ ತಪ್ಪಿರುವ ಅಂದಾಜುಗಳನ್ನು ಕೌಂಟರಿ ಸೈನ್ ಮಾಡಿ ಮೊಬಲಗು ತಮ್ಮ ಸ್ವಾಧೀನಕ್ಕೆ ಕೊಡಿಸಬೇ

ಕೆಂಬದಾಗಿ ಹಾಸನ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರಿಂದ ತಲ್ಪಿದ 29—7—09ರ ಮರ್ಕುಂ 274ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಮೇಲ್ಕಂಡ ಅಂದಾಜಗಳ ಪೈಕಿ ಹರಿಗೋಲು ವಗ್ಯರಿ ಬಾಬತ್ತು 150 ರೂಪಾಯಿ ಅಂದಾಜ ಅಪ್ರಕೃತವಾಗಿ ಬಾಕಿ 773 ರೂಪಾಯಿ ಅಂದಾಜಕ್ಕೆ ಒಪ್ಪಿ ಕಳುಹಿಸಬೇಕೆಂತಲೂ ಈ ಬಾಬತ್ತು ಮೊಬಲಗನ್ನು ಹಾಲ್‌ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟು "ಎ. ಪಬ್ಲಿಕ್ ವರ್ಕ್ಸ್ I ವರಿಜನಲ್" ಎಂಬ ಹೆಡ್ಡಿನಲ್ಲಿ ದಾಖಲಾಗಿರುವ 1,000 ರೂಪಾಯಿಗಳಿಂದ ಉಪಯೋಗಿಸಬಹುದೆಂತ ತೀರ್ಮಾನಿಸಲಾಯಿತು.

X. ಸಕಲೇಶಪುರದಲ್ಲಿರುವ ಲೋಕಲ್ ಫಂಡು ಡಿಸ್ಪೆನ್ಸರಿ ಮುಂದಿನ ಪೋರ್ಟಿಕೊ ಕೆಲಸವನ್ನು ಕಂಪ್ಲೀಟ್ಮಾಡಲು 160 ರೂಪಾಯಿಗಳ ಬಾಬತ್ತು ಅಂದಾಜವನ್ನು ಕಳುಹಿಸಿ ಇದಕ್ಕೆ ಅವಶ್ಯಕವಾದ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡು ಬಾಬತ್ತು ಕಂಟ್ರಿಬ್ಯೂಷ್ಷನ್ ಕೊಡಿಸ್ಬೇಕೆಂಬ ಹಾಸನ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ 19—7—09ರ ಮರ್ಕುಂ 264ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ—ಮೇಲೆ ನಮೂದಿಸಿರುವ Vನೆ ನಂಬರು ತೀರ್ಮಾನವನ್ನು ನೋಡಿ.

XI. ಚನ್ನರಾಯಪಟ್ಟಣ ತಾಲ್ಲೂಕು ಗನ್ನಿಕಡುವಿನಲ್ಲಿರುವ ಜಂಜಾಲು ರಿಪೇರಿ ಬಗ್ಯೆ 99 ರೂಪಾಯಿಗಳ ಬಾಬತ್ತು ಅಂದಾಜಕ್ಕೆ ಕೌಂಟರ್ ಸೈ ಮಾಡಿ ಕಳುಹಿಸಬೇಕೆಂತ ಹಾಸನ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರಿಂದ ತಲ್ಪಿದ 28-7-09ರ ಮರ್ಕುಂ 275ನೆ ನಂಬರ್ ಡಾಕೆಟ್ ಓದಲಾಯಿತು.

ತೀರ್ಮಾನ:—ಪ್ರಸಕ್ತವಾದ ಅಂದಾಜವನ್ನು ಕೌಂಟರ್ ಸೈ ಮಾಡಿ ವಾಪಸು ಕಳುಹಿಸಬೇಕೆಂತಲೂ ಈ ಬಾಬತ್ತು ಖರ್ಚನ್ನು ಹಾಲ್‌ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿನಲ್ಲಿ "ಎ. ಪಬ್ಲಿಕ್ ವರ್ಕ್ಸ್ II ರಿಪೇರ್ಸ್ ರಿಜರ್ವ್" ಹೆಡ್ಡಿನಲ್ಲಿ ದಾಖಲಾಗಿರುವ 410 ರೂಪಾಯಿಗಳ ಪೈಕಿ ಕೊಡಬಹುದೆಂತ ತೀರ್ಮಾನಿಸಲಾಯಿತು.

XII. ಬಿಸಲೆ, ಶುಕ್ರವಾರಸಂತೆ, ಕೆಂಪಕಲ್ಲು ಮತ್ತು ಮಾರನಹಳ್ಳಿ ಟ್ರಾವಲರ್ಸ್ ಬಂಗ್ಲಾಗಳಿಗೆ ಹಾಲ್‌ಸಾಲಿನಲ್ಲಿ ಚಾಟು ಕಾಮಗಾರಿ ಬಗ್ಯೆ ಕಳುಹಿಸಿರುವ ಅಂದಾಜಗಳನ್ನು ಕೌಂಟರ್ ಸೈನಿಂದ ವಾಪಸ್ಮಾಡಬೇಕೆಂಬ ಹಾಸನ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ 26—6—09ರ ಮರ್ಕುಂ 239, 240, 241 ಮತ್ತು 242ನೆ ನಂಬರ್ ಡಾಕೆಟ್‌ಗಳನ್ನು ಓದಲಾಯಿತು.

ತೀರ್ಮಾನ—ಈ ನಾಲ್ಕು ಅಂದಾಜಗಳಲ್ಲಿ ಒಟ್ಟು 108 ರೂಪಾಯಿಗಳಿಗೆ ಕೌಂಟರ್ ಸೈನಿಗೆ ಕಳುಹಿಸಬಹುದೆಂತ ತೀರ್ಮಾನಿಸಲಾಯಿತು.

XIII. ಮಂಜರಾಬಾದ್ ತಾಲ್ಲೂಕು ಸಕಲೇಶಪುರ ಮತ್ತು ಹಾರ್ಟಬಾಳುನಲ್ಲಿರತಕ್ಕ ಲೋಕಲ್ ಫಂಡು ಡಿಸ್ಪೆನ್ಸರಿಗಳಿಗೆ ಚಾಟು ಕಾಮಗಾರಿಗಾಗಿ ತಲ್ಪಿರುವ ಅಂದಾಜಗಳನ್ನು ಕೌಂಟರ್ ಸೈನಿಗೆ ಕಳುಹಿಸಿಕೊಡಬೇಕೆಂತಲು ಇವಕ್ಕಾಗಿ ಮ್ಯುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಬೇಕಾಗುವ ಕಂಟ್ರಿಬ್ಯೂಷ್ಷ ಮೊಬಲಗನ್ನು ಪಾವತಿ ಮಾಡಿಸಬೇಕೆಂಬ ಎಗ್ಜಿಕ್ಯೂಟಿವ್ ಇಂಜನಿಯರವರ 26—6—09ರ ಮರ್ಕುಂ 243 ಮತ್ತು 244ನೆ ನಂಬರ್ ಡಾಕೆಟ್‌ಗಳನ್ನು ಓದಲಾಯಿತು.

ತೀರ್ಮಾನ—ಈ 2 ಕೆಲಸಗಳಿಗೂ ಡಿಸ್ಟ್ರಿಕ್ಟ್ ಫಂಡು ಕಂಟ್ರಿಬ್ಯೂಷ್ಷ 25 ರೂಪಾಯಿಗಳನ್ನು ಹಾಲ್ ಸಾಲ್ ಬಜ್ಜೆಟ್ಟಿನಲ್ಲಿನ "IX ಕಂಟ್ರಿಬ್ಯೂಷ್ಷ (3) ಡಿಸ್ಪೆನ್ಸರಿಗಳ ರಿಪೇರಿಗೆ" ದಾಖಲಾಗಿರುವ 1,000 ರೂಪಾಯಿಗಳ ಪೈಕಿ ಕೊಡಬೇಕೆಂದು ತೀರ್ಮಾನಿಸಲಾಯಿತು.

XIV. (1) ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಡಿಸ್ಪೆನ್ಸರಿ ಕಟ್ಟಡಗಳಿಗೆ ಕಾಂಪೌಂಡು ಗೋಡೆಗಳನ್ನು ಹಾಕತಕ್ಕ ಬಗ್ಯೆ ತಗಲುವ ಲಾಗೋಡು 28,145 ರೂಪಾಯಿಗಳ ಪೈಕಿ ಡಿಸ್ಟ್ರಿಕ್ಟ್ ಫಂಡು ಕಾಂಟ್ರಿಬ್ಯೂಷ್ಷ ಮೊಬಲಗು 11,729 ರೂಪಾಯಿಗಳನ್ನು ಮರಹಮ್ಮತ್ತು ಇಲಾಖಾ ಸ್ವಾಧೀನಕ್ಕೆ ಕೊಡತಕ್ಕ ಬಗ್ಯೆ ಅವಶ್ಯಕವಾದ ಏರ್ಪಾಡಿಡಿಸಬೇಕಾಗಿ ವಗ್ಯೆರೆ ಸೀನಿಯರ್ ಸರ್ಜ್ಜ್ ಸಾಹೇಬರಿಂದ ತಲ್ಪಿದ (28—6—09ರ ಮರ್ಕುಂ 3176ನೆ ನಂಬರು ಡಾಕೆಟ್ ಕಾಪಿಯನ್ನು ಸೂ॥ ಇಂಜನಿಯರ ಡಾಕೆಟ್ ಕಾಪಿ) 6—7—09ರ ಮರುಂ 90ನೆ ನಂಬರ್ ಮೆಮೊ ಓದಲಾಯಿತು.

ತೀರ್ಮಾನ—ಡಿಸ್ಟ್ರಿಕ್ಟ್ ಫಂಡ್ಸಿನ ಈಗಿನ ಸ್ಥಿತಿಯಲ್ಲಿ ಕಾಂಪೌಂಡು ಗೋಡೆಗಳಿಗೆ ಹಣ ವದಗಿಸಲು ಸಾಧ್ಯವಿಲ್ಲವೆಂತಲೂ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣ ಶೇಖರವಾಗುವ ವರಿವಿಗೂ, ಈ ವಿಚಾರದಲ್ಲಿ ಹಿಂದೆ ಸೀನಿಯರ್ ಸರ್ಜ್ಜ್ ಸಾಹೇಬರು ಅಭಿಪ್ರಾಯಪಟ್ಟಿದ್ದಂತೆ ಬೇಲಿಗಳನ್ನು ಡಿಸ್ಪೆನ್ಸರಿ ನೌಕರರಿಂದ ಹಾಕಿಸಬಹುದಾಗಿ ತೀರ್ಮಾನಿಸಲಾಯಿತು.

XV. ಅರ್ತಲಗೂಡು ತಾಲ್ಲೂಕಿನಲ್ಲಿ ವಲ್ಲಭರಾಜಪಟ್ಟಣದಿಂದ ಕೃಷ್ಣರಾಜಕಟ್ಟೆಗೆ ಹೋಗುವ ಬಂಡಿ ಜಾಡನ್ನು ಸರಿಯಾಗಿ ಇಟ್ಟುಕೊಳ್ಳಲು ಸಾಲೀಯಾನ 80 ರೂಪಾಯಿಗಳು ಅವಶ್ಯಕವೆಂತಲೂ ಈ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡುವದಕ್ಕೆ ಏರ್ಪಾಡಿಡಿಸಬೇಕೆಂದು ವಗ್ಯೆರೆ ಛಾನಲ್ ಕ್ಲರ್ಕ್ಸರ್ವೆಸ್ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರಿಂದ ತಲ್ಪಿದ 24-7-09ರ ಮರ್ಕುಂ 539ನೆ ನಂಬರ್ ಮೆಮೊ ಓದಲಾಯಿತು.

ತೀರ್ಮಾನ—$2\frac{1}{2}$ ಮೈಲಿಗಳಿರುವ ಪ್ರಸಕ್ತವಾದ ರಸ್ತೆಯನ್ನು ಡಿಸ್ಟ್ರಿಕ್ಟ್ ಫಂಡು ರಸ್ತೆಯಾಗಿ ಭಾವಿಸಿ ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಯೆ ಬರುವ ಸಾಲ್ ಲಾಗಾಯಿತ್ತು ವರ್ಷಂ ಪ್ರತಿ 80 ರೂಪಾಯಿ ಕೊಡತಕ್ಕ ಬಗ್ಯೆ ಬಜ್ಜೆಟ್ಟಿನಲ್ಲಿ ದಾಖಲ್ಮಾಡುತ್ತಾ ಬರಬೇಕಾಗಿ ತೀರ್ಮಾನಿಸಲಾಯಿತು.

XVI. ಪ್ರತಿ ವರ್ಷದ ಸಾಲ್ ಪುರುವಿನಲ್ಲಿ ಷೆಡ್ಯೂಲ್ ಆಫ್ ರೇಟ್ಸ್‌ನ್ನು ಡಿಸ್ಟ್ರಿಕ್ಟ್ ಬೋರ್ಡಿನ ವಿಾಟಿಂಗಿನವೇಳೆ ರಿವೈಜ್ ಮಾಡಿ ಅದರ ಕಾಪಿ ಬಂದನ್ನು ಗಾರ್ನಮೆಂಟಿಗೆ ಕಳುಹಿಸಬೇಕೆಂತ ತಲ್ಪಿದ್ದ ಗಾರ್ನಮೆಂಟ್ 6—2—09ರ ಮರ್ಕುಂ 7397-405—ಎಲ್. ಬಿ. 432-06ನೆ ನಂಬರು ಪ್ರೊಸೀಡಿಂಗ್ಸ್ ಪುನಹ ಓದಲಾಯಿತು.

(2) ಇದೇ ವಿಚಾರದಲ್ಲಿ ಕೆಲವು ತಾಲ್ಲೂಕುಗಳಿಂದ ತಲ್ಪಿದ ರಿಪೋರ್ಟುಗಳನ್ನು ಓದಲಾಯಿತು.

ತೀರ್ಮಾನ—ಡಿಸ್ಟ್ರಿಕ್ಟ್ ಬೋರ್ಡಿನ ಷೆಡ್ಯೂಲ್ ಆಫ್ ರೇಟ್ಸಿನೊಂದಿಗೆ ಡಿ. ಪಿ. ಡಬ್ಲ್ಯ್ಯೂ. ಇಲಾಖೆಯಲ್ಲಿರತಕ್ಕ ರೇಟ್ಸ್ ನೋಡಿ ಸರಿಪಡಿಸಲು ಆ ಇಲಾಖೆಯಿಂದ ಸದರಿ ಷೆಡ್ಯೂಲ್ ಬಂದಿಲ್ಲವಾಗಿ ಜಾಗ್ರತೆಯಲ್ಲಿ ಕಳುಹಿಸಿಕೊಡಲು ಒರ ಸಬೇಕೆಂತ ತೀರ್ಮಾನಿಸಲಾಯಿತು.

XVII. ಆಲೂರು ಸಬ್ ತಾಲ್ಲೂಕು ಸಿದ್ದಾಪುರದಲ್ಲಿ ಪ್ರತಿ ಮಂಗಳವಾರವು ಬಂದು ಸಂತೆ ನಡಿಯುಬೇಕೆಂಬದಾಗಿ ಶಿಫಾರಸ್ ಮಾಡಿರುವ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 24—5—09ರ ಮುಕ್ಕಂ 904ನೆ ನಂಬರು ಲೆಟರು ಓದಲಾಯಿತು.

(2) ಇದೇ ವಿಚಾರದಲ್ಲಿ 25—2—09ರಲ್ಲಿ ನಡೆದಿದ್ದ ಡಿಸ್ಟ್ರಿಕ್ಟ್ ಬೋರ್ಡಿನ ತೀರ್ಮಾನವನ್ನು ಸಹಾ ಓದಲಾಯಿತು.

ತೀರ್ಮಾನ—ಈ ಸಿದ್ದಾಪುರ ಗ್ರಾಮವು ರಸ್ತೆಗಳಿಗೆ ಅವಕಾಶವಿಲ್ಲದೇಲೂ ಮತ್ತು ಗೋರೂರು ಸಂತೆಗೆ 2 ಮೈಲಿ ಛಾಸ ಲೆಯಲ್ಲಿರುವದರಿಂದಲು ಸಂತೆ ನೆರಿಯುವದಕ್ಕೆ ಇದು ಸರಿಯಾದ ಜಾಗವಲ್ಲವೆಂತ ತೀರ್ಮಾನಿಸಲಾಯಿತು. ಆದರೆ ಹೋಬಳಿ ಹೆಡ್‌ಕ್ವಾರ್ಟರಾಗಿಯೂ, ರಸ್ತೆಗಳುಳ್ಳದ್ದಾಗಿಯೂ ಕರುವ ಮತ್ತು ಪೊಲೀಸ್ ಸ್ಟೇಷನ್ ಸಹ ವುಳ್ಳ ಕುಂ ದೂರಿನಲ್ಲಿ ಬಂದು ಸಂತೆ ನಡಿಯತಕ್ಕ ಬಗ್ಗೆ ಶಿಫಾರ್ಸು ಮಾಡಬೇಕೆಂತ ತೀರ್ಮಾನಿಸಲಾಯಿತು.

XVIII. ಅರ್ತಲಗೂಡು ತಾಲ್ಲೂಕು ಮುತ್ತುಗದ ಹೊಸೂರು ಗ್ರಾಮದಲ್ಲಿನ ಭಾವಿ ಆಳಪಡಿಸುವದಕ್ಕೆ ತಯಾರಾಗಿರುವ ರಿವೈಜ್ಡ್ ಅಂದಾಜು ವಿಚಾರದಲ್ಲಿ 25—2—09ರ ಮುಕ್ಕಂನಲ್ಲಿ ನಡೆದ XIVನೆ ನಂಬರು ಡಿಸ್ಟ್ರಿಕ್ಟ್ ಬೋರ್ಡು ತೀರ್ಮಾನವನ್ನು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಭಾವಿಯು 6 ಮತ್ತು 7ನೆ ಮಟ್ಟುಗಳಲ್ಲಿ ಬಹಳ ಘಟ್ಟಿ ಅರೆ ಶಿಕ್ಕಿರುವದರಿಂದ ಸುರಂಗ ಹಾಕು ವದಕ್ಕೋಸ್ಕರ 16, 17 ಮತ್ತು 18 ರೂಪಾಯಿಗಳ ದರದಂತೆ ಮಂಜೂರ್ಮಾಡಬಹುದಾಗಿ ಪ್ರಸಕ್ತವಾದ 792 ರೂಪಾಯಿಗಳ ಅಂದಾಜನ್ನಿಗೆ ಗಾರ್ನ್‌ಮೆಂಟಿಗೆ ಶಿಫಾರಸ್ ಮಾಡಬೇಕಾಗಿ ತೀರ್ಮಾನಿಸಲಾಯಿತು.

XIX. (1) ಮುಸವನಘಟ್ಟ ಮತ್ತು ಸೋಮಶೆಟ್ಟಿಹಳ್ಳಿ ಗ್ರಾಮಗಳಲ್ಲಿನ ಭಾವಿಗಳ ಬಾಬತು ರಿವೈಜ್ಡ್ ಅಂದಾಜ ಅನು ಸರಿಸಿ ಪೂರೈಸುವದನ್ನು ಮಂಜೂರ್ಮಾಡಿ ಹೆಚ್ಚಿಗೆ ಲಾಗೋಡಿಗೆ ಬಜ್ಜೆಟ್ಟಿನಲ್ಲಾಗಲಿ ಅಥವಾ ಇನ್‌ಕಂಪ್ಲೀಟ್ ವರ್ಕ್ಸ್ ಲೀಸ್ಟಿನಲ್ಲಾಗಲಿ ಇಲ್ಲದ ಸಂಭವಗಳಲ್ಲಿ ಗಾರ್ನ್‌ಮೆಂಟು ಮಂಜೂರಾತಿ ಪಡಿಯಬೇಕಾಗಿ ತಲ್ಪಿದ 12—5—09ರ ಮುಕ್ಕಂ 12505-6—ಎಲ್. ಬಿ. 154-08-18ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್.

(2) ಕುಡಿಯುವ ನೀರಿಗಾಗಿ ಭಾವಿಗಳನ್ನು ತೋಡಿಸತಕ್ಕ ಬಗ್ಗೆ ಪ್ರತ್ಯೇಕ ಮೊಬಲಗು ಬದಗಿಸಿಕೊಟ್ಟದ್ದಕ್ಕಾಗಿ ಬೋರ್ಡಿನವರ ವಂದನೆಗಳನ್ನು ರಿಕಾರ್ಡು ಮಾಡಿರುತ್ತೆಂಬ 14—6—09ನೆ ಮುಕ್ಕಂ ರೆ. 10547—ಅಗ್ರಿ. 67-03-87ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸು.

(3) 1909-10ನೆ ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿನಲ್ಲಿ "ಲೋಕಲ್ ಫಂಡ್ ಡಿಸ್ಪೆನ್ಸರಿ ಕಟ್ಟಡಗಳ ರಿಪೇರಿಗಾಗಿ ಕಂಟಿಂಜೆನ್ಸಿ" ಮೊಬಲಗು ಹೆಚ್ಚಾಗಿ ದಾಖಲ್ಮಾಡಿರುವದನ್ನು ಗವರ್ನಮೆಂಟಿನವರ ಪ್ರತ್ಯೇಕ ಮಂಜೂರಿ ಪಡಿಯದೆ ಉಪ ಯೋಗಿಸಕೂಡದೆಂಬ 17—6—09ರ ಮುಕ್ಕಂ 12733-5—ಎಲ್. ಬಿ. 372-08-6ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸು.

(4) ರಾಮನಾಥಪುರ ಮತ್ತು ಗೋರೂರು ಕಡುವುಗಳಿಗೆ ಹೊಸ ದೋಣಿಗಳನ್ನು ಸಪ್ಲೈ ಮಾಡತಕ್ಕಬಗ್ಗೆ 650 ರೂಪಾಯಿಗಳನ್ನು ರಿ-ಅಪ್ರೊಪ್ರಿಯೇಟ್ ಮಾಡಿದ್ದನ್ನು ಮಂಜೂರ್ಮಾಡಿರುತ್ತೆಂಬ 21—6—09ರ ಮುಕ್ಕಂ 12316-7—ಎಲ್. ಬಿ. 183-08-6ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸು.

(5) ಸೂಲಗಿತ್ತಿಯರಿಗೆ ಸಲ್ಲಬೇಕಾಗಿದ್ದ ಹಿಂದಿನ ಕೆಲವು ತಲಬು ವಿಚಾರದಲ್ಲಿ ಹುಕುಂವಾಣಿ ಇವರುಗಳಿ ತಲಬು ಮಾಹೆಯಾನ 15 ರೂಪಾಯಿನಂತೆ ಬಂದೇಬರ ಇನ್ನುಮುಂದೆ ಇರಬೇಕೆಂತಲೂ, ಈ ತಲಬಿನೊಂದಿಗೆ ನಿಯಾವುಕವಾಗಿರುವ ಲೋಕಲ್ ಅಲೋಯನ್ಸು ಕೊಡಬಹುದೆಂಬ 21—6—09ರ ಮುಕ್ಕಂ 12819-29—ಎಲ್. ಬಿ. 55-93ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸು.

(6) ಪ್ರೈವೇಟ್ ಯಸ್ಟೇಟ್‌ಗಳಿಗೆ ಹೋಗತಕ್ಕ ರಸ್ತೆಗಳನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಹಣ ಮುಟ್ಟಿಸಿ ಸರಿಯಾಗಿ ಇಟ್ಟು ಕೊಳ್ಳತಕ್ಕದ್ದನ್ನು ಮನ್ನಾಮಾಡತಕ್ಕ ವಿಚಾರದಲ್ಲಿ ಬಂದ ಚೀಫ್ ಇಂಜನಿಯರವರ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ರವರುಗಳ ಲೆಟರುಗಳನ್ನು ರಿಕಾರ್ಡು ಮಾಡಿರುವದಾಗಿ ತಲ್ಪಿರುವ 5—7—09ರ ಮುಕ್ಕಂ 111-20—ಎಲ್. ಬಿ. 2000ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸು.

(7) ಕಬ್ಬಾಳು ಗ್ರಾಮಸ್ಥರು ಬಂಬುಭಾವಿ ತೆಗಿಸತಕ್ಕ ಬಗ್ಗೆ 800 ರೂಪಾಯಿ ಕಂಟ್ರಿಬ್ಯೂಷ್ ಕೊಟ್ಟದ್ದರಮೇ ಲೆ ಈ ಭಾವಿ ಕೆಲಸಕ್ಕಾಗಿ ತಯಾರಾದ 800 ರೂಪಾಯಿಗಳ ಅಂದಾಜವನ್ನು ಮಂಜೂರ್ಮಾಡಿರುತ್ತೆಂತಲೂ ಈ ಬಾಬತು ಮೊಬ ಲಗನ್ನು 1909-10ನೆ ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜೆಟ್ಟಿನಲ್ಲಿ ಬಿ. ಪಬ್ಲಿಕ್ ವರ್ಕ್ಸ್‌ಗೋಸ್ಕರ ಇರತಕ್ಕ ಹಣದ ಪೈಕಿ ಕೊಡಬೇಕಾ ಗಿಯೂ, ಇನ್ನು ಹಣ ಬೇಕಾದಲ್ಲಿ ಮುಂದೆ ಬರಬಹುದೆಂತ ಸಹಾ ತಲ್ಪಿದ 29—6—09ರ ಮುಕ್ಕಂ 13147-8—ಎಲ್. ಬಿ. 350-08-5ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸು.

(8) ತಿಪ್ಪೂರು-ಚನ್ನರಾಯಪಟ್ಟಣದ ರಸ್ತೆಗೆ ನಡೆದ ಸ್ಪೆಷಲ್ ರಿಪೇರಿ ಕೆಲಸಕ್ಕಾಗಿ ಇತರ ಫಂಡ್ಸಿನಿಂದ ಗ್ರಾಂಟ್ ಕೊಡಲು ಅವಶ್ಯಕವಿಲ್ಲವೆಂತಲು ಈ ಬಾಬತು ಖರ್ಚನ್ನು ಡಿಸ್ಟ್ರಿಕ್ಟ್ ಫಂಡಿಗೆ ದಾಖಲ್ಮಾಡಬೇಕೆಂಬದಾಗಿ ಕಂಟ್ರೋಲರ್ ಸಾಹೇಬರಿಗೆ ತಿಳಿ ಯಪಡಿಸಿರುತ್ತೆಂಬ 4—7—09ರ ಮುಕ್ಕಂ 514-7—ಎಲ್. ಬಿ. 169-08-15ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸು.

ಮೇಲ್ಕಂಡವುಗಳನ್ನು ಬೋರ್ಡಿನವರ ತಿಳುವಳಿಕೆ ಬಗ್ಗೆ ಓದಲಾಯಿತು.

XX. (1) ತಿಪ್ಪೂರು-ಚನ್ನರಾಯಪಟ್ಟಣದ ರಸ್ತೆಗೆ ಸ್ಪೆಷಲ್ ರಿಪೇರಿ ಕೆಲಸ ನಡಿಸುತ್ತಿರುವದನ್ನು ಸದ್ಯಕ್ಕೆ ನಿಲ್ಲಿಸಬೇಕೆಂದು ಚನ್ನರಾಯಪಟ್ಟಣದ ಡಿ. ಟಿ. ಡಬ್ಲ್ಯು. ಸೂಪರ್‌ವೈಜರಿಗೆ ಅಪ್ಪಣೆ ಮಾಡಿರುತ್ತೆಂಬ ವಗ್ಗೈರೆ ಹಾಸನ ಡಿವಿಜ್ ಎಕ್ಸಿಕ್ಯುಟಿವ್ ಇಂಜನಿಯರ್ ಸಾಹೇಬರವರಿಂದ ತಲ್ಪಿದ 22—7—09ರ ಮರ್ಕುಂ 266ನೆ ನಂಬರ ಡಾಕೆಟ್ ಓದಲಾಯಿತು.

(2) ಹಾಲಿ ಕಾಲಸ್ಥಿತಿ ಅನುಕೂಲವಾಗಿರುತ್ತಾದ್ದರಿಂದ ಮೇಲ್ಕಂಡ ಸ್ಪೆಷಲ್ ಕೆಲಸವನ್ನು ಇನ್ನು ಮುಂದೆ ಮಾಡಿಸುವದು ಅವಶ್ಯಕವಿಲ್ಲವೆಂಬಬಗ್ಗೆ ಜ॥ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿದ 29—7—09ರ ಮರ್ಕುಂ 14ನೆ ನಂಬರ್ ಯಾದಿ ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ರಿಪೇರಿ ಕೆಲಸವನ್ನು ಮುಂದೆ ಮಾಡಿಸತಕ್ಕದ್ದು ಅನಾವಶ್ಯಕವೆಂತಲೂ ಹಾಲಿ ಎಗ್ಜಿಕ್ಯುಟಿವ್ ಇಂಜನಿಯರವರು ಹೇಳಿದಂತೆ ಹಿಂದೆ ಖರ್ಚಾಗಿರುವ ಹಣವೆಲ್ಲ ಮೆಟಿರಿಯಲ್ಸ್ ಜನಾವಣೆಗೋಸ್ಕರ ಆಗಿರುವದರಿಂದ ಮೈಲೇಜು ಅಲಾಟ್‌ಮೆಂಟಿನಿಂದ ಸಾಧ್ಯವಾದಷ್ಟುದೂರ ಬಚಾವಣೆಂಕೆಲಸ ನಡಿಸಬಹುದೆಂಬ ಬಗ್ಗೆ ಎಗ್ಜಿಕ್ಯುಟಿವ್ ಇಂಜನಿಯರವರಿಗೆ ಬರಿಸಬೇಕಾಗಿ ತೀರ್ಮಾನಿಸಲಾಯಿತು.

XXI. (1) ಹೊಳೇನರಸೀಪುರ ತಾಲ್ಲೂಕಿನಲ್ಲಿನ ಕಿಕ್ಕೇರಿ-ಹಿಪ್ಪೆ ರಸ್ತೆಯ ಬಾಬತು ಸ್ಪೆಷಲ್ ಕೆಲಸವನ್ನು ರಿಲೀಫ್‌ಗೋಸ್ಕರವಿರುವ ಇತರ ಕೆಲಸಗಳೆಲ್ಲಾ ಪೂರೈಸಿದ ನಂತರ ನಡಿಸಬಹುದೆಂತಲು ಇದಕ್ಕೆ ಆಗುವ ಖರ್ಚನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡತಕ್ಕ ವಿಚಾರದಲ್ಲಿ ಬೋರ್ಡಿನವರ ತೀರ್ಮಾನ ನಿಶಿ ಜವಾಬು ಬೆಳಸಬೇಕೆಂಬ ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿಯವರ 5—5—09ರ ಮರ್ಕುಂ 10965—ಎಲ್. ಬಿ. 169-08-12ನೆ ನಂಬರ್ ಡಾಕೆಟ್ ಓದಲಾಯಿತು.

(2) ತಾಲ್ಲೂಕು ಆವುಳಿ ಎಲ್ಲಾ ಕಡೆಯಲ್ಲೂ ಮಳೆಯಾಗಿರುವದರಿಂದ ಕೂಲಿಗಳು ವ್ಯವಸಾಯದ ಕೆಲಸಗಳಲ್ಲಿ ನಿರುತರಾಗಿರುತ್ತಾರೆ. ಆದ್ದರಿಂದ ಈ ಕೆಲಸ ಅವಶ್ಯಕವಿಲ್ಲವೆಂಬದಾಗಿ ವಗ್ಗೈ ತಲ್ಪಿದ ಹೊಳೇನರಸೀಪುರ ತಾಲ್ಲೂಕು ಅ॥ ಕ॥ 11—5—09ರ ಮರ್ಕುಂ 453ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಕೆಲಸವನ್ನು ನಡಿಸುವ ಅವಶ್ಯಕತೆ ವುಂಟಾಗಲಿಲ್ಲವಾಗಿ ಇದಕ್ಕೆ ಯಾವ ಖರ್ಚು ಆಗಿಲ್ಲವೆಂತ ತೀರ್ಮಾನಿಸಲಾಯಿತು.

XXII. ಮಿ॥ ಮುದ್ದಪ್ಪನವರು ಕೇಳುತ್ತಿರುವ ಭಕ್ತರವಳ್ಳಿಯಿಂದ ಕಟ್ಟಾಯಹಳ್ಳಿ ಬೈಲು ರಸ್ತೆಗೆ ಸೇರುವಂತೆ ಬಂದು ಬಂಡಿಜಾಡು ಮಾಡಿಸಿಕೊಡುವಲ್ಲಿ ಕೆಲವು ಹಳ್ಳಿಗಳಿಗೆ ಅನುಕೂಲವಾಗುತ್ತೆಂತಲೂ ಈ ಕೆಲಸಕ್ಕಾಗಿ ಇವರು 150 ರೂಪಾಯಿ ಕಂಟ್ರಿಬ್ಯೂಷ್ಯ ಕೊಡುವದಾಗಿ ಬಿಟ್ಟರುತ್ತಾರೆಂದು ವಗ್ಗೈರೆ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರಿಂದ ತಲ್ಪಿದ 5-21-7-09ರ ಮರ್ಕುಂ 25ನೆ ಲೆಟರಿನ 4ನೆ ಪ್ಯಾರಾ ಎಕ್ಸ್ಟ್ರಾಕ್ಟು ಓದಲಾಯಿತು.

ತೀರ್ಮಾನ—ಈ ರಸ್ತೆ ಹಾಕಿಸುವ ವಿಚಾರದಲ್ಲೂ ಮತ್ತು ಇದಕ್ಕಾಗಿ ಕಂಟ್ರಿಬ್ಯೂಷ್ಯ ಕೊಡತಕ್ಕ ವಿಚಾರದಲ್ಲೂ ಮಿ॥ ಮುದ್ದಪ್ಪನವರಿಗೆ ಸೈಸಿಡೆಂಟರ ಆಫೀಸಿನಿಂದ ಬರೆಸಬೇಕೆಂತಲೂ ಈ ರಸ್ತೆ ಯಾವಮಾರ್ಗವಾಗಿ ಹೋಗುತ್ತೆ ಮತ್ತು ಇದಕ್ಕೆ ತಗಲಬಹುದಾದ ಲಾಗೋಡನ್ನು ತಿಳಿಸಬೇಕಾಗಿಯೂ, ಈ ವಿಚಾರದಲ್ಲಿ ಆಲೂರು ತಾಲ್ಲೂಕು ಬೋರ್ಡ್ ತೀರ್ಮಾನ ಸಹಾ ಕಳುಹಿಸಿಕೊಡಬೇಕಾಗಿ ತೀರ್ಮಾನಿಸಲಾಯಿತು.

XXIII. ಹಾಸನ ತಾಲ್ಲೂಕು ಕಟ್ಟಾಯದಲ್ಲಿನ ಭಾವಿಯನ್ನು ಆಳಪಡಿಸುವದಕ್ಕೋಸ್ಕರ 1905ನೆ ಆಗಸ್ಟು ಮಾಹೆಯಲ್ಲಿ 70 ರೂಪಾಯಿಗಳಿಗೊಂದು ಅಂದಾಜು ಮಾಡಿದ್ದರನುಸಾರವಾಗಿ ಕೆಲಸ ನಡಿಸಿ 66—0—3 ಪೈಗೆ ಬಿಲ್‌ನಿಶಿ ಕಳುಹಿಸಿರುವ ಅಸಿಸ್ಟೆಂಟ್ ಕಮಿಷನರವರ 30—6—09ರ ಮರ್ಕುಂ 1053ನೆ ನಂಬರ್ ರಿಪೋರ್ಟು ಓದಲಾಯಿತು.

ತೀರ್ಮಾನ—ಪ್ರಸಕ್ತವಾದ ಅಂದಾಜವನ್ನು ಹಿಂದೆ ಮಂಜೂರ್ಮಾಡಿ ನಾಲ್ಕು ವರುಷಗಳಾಗಿದ್ದು ಈಗ ಕೆಲಸ ನಡದಿರುತ್ತೆಯಾಗಿ ಲೋಕಲ್ ಬೋರ್ಡ್ಸ್ ರೂಲ್ಸು 94ನೆ ರೂಲ್ ಪ್ರಕಾರ 67 ರೂಪಾಯಿಗಳಿಗೆ ಒಂದು ಹೊಸ ಅಂದಾಜವನ್ನು ಮಂಜೂರ್ಮಾಡಿರುತ್ತೆಂತಲೂ ಇದಕ್ಕಾಗಿ ಹಾಲ್‌ಸಾಲ್ ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟಿನಲ್ಲಿ ಬಿ. ಪಬ್ಲಿಕ್ ವರ್ಕ್ಸ್ 1ನೆ ಹೆಡ್ಡಿನಲ್ಲಿ ಹಾಸನ ತಾಲ್ಲೂಕಿಗಾಗಿರುವ 775 ರೂಪಾಯಿಗಳ-ಪೈಕಿ ಉಪಯೋಗಿಸಿಕೊಳ್ಳಬಹುದೆಂತ ತೀರ್ಮಾನಿಸಲಾಯಿತು.

XXIV. (1) ಚನ್ನರಾಯಪಟ್ಟಣ ತಾಲ್ಲೂಕು ಕಾರೆಹಳ್ಳಿ ಬಳಿ ಟೋಲ್‌ಗೇಟು ಸ್ಥಾಪನೆ ಮಾಡತಕ್ಕ ವಿಚಾರದಲ್ಲಿ ಇನ್ನು ಕೆಲವು ತಪಸೀಲ್ ಅಪೇಕ್ಷಿಸಿ ಜನರಲ್ ಮತ್ತು ರೆವಿನ್ಯೂ ಸೆಕ್ರಿಟರಿಯವರಿಂದ ತಲ್ಪಿರುವ 1—7—09ರ ಮರ್ಕುಂ 407—ಎಲ್. ಬಿ. 405-03-2ನೆ ನಂಬರ್ ಡಾಕೆಟ್ ಓದಲಾಯಿತು.

(2) ಈ ವಿಚಾರದಲ್ಲಿ ಸ್ಪೆಜ್‌ನಿಶಿ ತಲ್ಪಿರುವ ಚನ್ನರಾಯಪಟ್ಟಣ ತಾಲ್ಲೂಕು ಅಸಿಸ್ಟೆಂಟರ ರಿಪೋರ್ಟು (8—8—09ರ ಮರ್ಕುಂ 22ನೆ ನಂಬರ್ ರಿಪೋರ್ಟು) ಓದಲಾಯಿತು.

ತೀರ್ಮಾನ—ಗವರ್ನಮೆಂಟಿನವರು ಕೇಳಿರುವ ಅಂಕಗಳಿಗೆ ಅವುಲ್ದಾರ್ರ ರಿಪೋರ್ಟಿನಮೇಲೆ ಜವಾಬು ಬೆಳಸಬೇಕೆಂತ ತೀರ್ಮಾನಿಸಲಾಯಿತು ಸಿಬ್ಬಂದಿ ವಗ್ಗೈರೆ ಖರ್ಚಿಗಾಗಿ ಬೇಕಾಗಿರುವ ವೊಖಲಗಿಗೆ ಬಜ್ಜಟ್ಟಿನಲ್ಲಿ ರಹವಿಲ್ಲವಾದ್ದರಿಂದ ಅವಶ್ಯಕ್ಕವಾದ ವೊಬಲಗನ್ನು ಡಿಸ್ಟ್ರಿಕ್ಟ್ ಫಂಡ್ ಕ್ಲೋಜಿಂಗ್ ಬ್ಯಾಲೆನ್ಸಿನಿಂದ ಕೊಡಿಸಿಕೊಡಬೇಕೆಂತ ಬರಸಬೇಕಾಗಿ ತೀರ್ಮಾನ ಮಾಡಲಾಯಿತು.

XXV. ಈ ವಿಷಯಂಗಿಗೆ ಹಾಜರಾಗಲು ಅನಿವಾರ್ಯತೆಯಿಂದ ಅವಕಾಶವಿಲ್ಲವೆಂಬ ಬಗ್ಗೆ ತಲ್ಪಿದ ಇದರಡಿ ನಮೂದಿಸಿರುವ ಮೆಂಬರುಗಳ ಖತ್ತುಗಳನ್ನು ಓದಲಾಯಿತು.

ಮಿ॥ ಕೊ. ರಾಮಚೆಟ್ಟು, ಹೊಳೇನರಸೀಪುರ.

ತೀರ್ಮಾನ—ಕೇಳಿ ವಿಲೆ ಇಡಿಸಲಾಯಿತು.

XXVI. ಮಂಜರಾಬಾದ್ ತಾಲ್ಲೂಕು ಯಸಳೂರು ಯೂನಿಯರ್ಜನಲ್ಲಿ ನಡೆಯಬೇಕೆಂಬ ರಸ್ತೆ ರಿಪೇರಿಗೋಸ್ಕರ ದಾಖಲಾಗಿರುವ 100 ರೂಪಾಯಿಗಳನ್ನು ಈ ವೂರಲ್ಲಿ ದೀಪ ಹಚ್ಚಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳತಕ್ಕ ಬಗ್ಗೆ ಅಪ್ಪಣೆ ಅಪೇಕ್ಷಿಸಿರುವ ತಾಲ್ಲೂಕು ಬೋರ್ಡು ತೀರ್ಮಾನದೊಂದಿಗೆ ತಲ್ಪಿರುವ ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರ 5—3—09ರ ಮರ್ಕುಂ 27-414ನೆ ನಂಬರ್ ಯಾದಿ ಓದಲಾಯಿತು.

ತೀರ್ಮಾನ—ಈಗ ರಸ್ತೆಗಳು ಒಳ್ಳೇ ಸ್ಥಿತಿಯಲ್ಲಿರುತ್ತೆಂತ ತಿಳಿಯುವದರಿಂದ ಮೇಲ್ಕಂಡ ವೊಬಲಗನ್ನು ಯಸಳೂರು ಯೂನಿರ್ಯನಲ್ಲಿ ದೀಪ ಹಚ್ಚಿಸತಕ್ಕ ಬಗ್ಗೆ ಉಪಯೋಗಿಸಿಕೊಳ್ಳಲು ಗವರ್ನಮೆಂಟ್ ಮಂಜೂರಾತಿ ಪಡಿಯಬೇಕೆಂತ ತೀರ್ಮಾನಿಸಲಾಯಿತು.

XXVII. ಇದಕ್ಕೆ ಸೇರಿಸಿರುವ ಲಿಸ್ಟಿನಲ್ಲಿ ಕಂಡ ತಾಲ್ಲೂಕುಗಳಿಂದ ತಲ್ಪಿರುವ ಬಡ್ಜೆಟ್ಟಿನಲ್ಲಿ ದಾಖಲಾಗಿರುವ ಕೆಲಸಗಳ ಬಾಬತು ಅಂದಾಜಿಗಳನ್ನು ಬದಲಾಯಿತು.

ತೀರ್ಮಾನ—ಪ್ರಸಕ್ತವಾದ ಲಿಸ್ಟಿನಲ್ಲಿ ಕಂಡ 22 ಕೆಲಸಗಳು (ಬಡ್ಜೆಟ್ಟಿನಲ್ಲಿ ದಾಖಲಾದವುಗಳು) ಮುಂಜೂರ್ಮಾಡಿ ಕೆಲಸ ನಡಿಸತಕ್ಕ ಬಗ್ಗೆ ತಾಲ್ಲೂಕಿಗೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

XXVIII. ಬರುವ ಮೀಟಿಂಗನ್ನು 1909ನೆ ಇಸವಿ ಸೆಪ್ಟಂಬರ್ ಮಾಹೆ 27ನೆ ಸೋಮವಾರ ಮಧ್ಯಾಹ್ನ ಪೂರ್ವ 1 ಘಂಟೆಗೆ ನಡಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

ಬಡ್ಜೆಟ್‌ನಲ್ಲಿ ನಮೂದಿರತಕ್ಕ ಕೆಲಸಗಳಿಗೆ ತಾಲ್ಲೂಕುಗಳಿಂದ ಬಂದ ಅಂದಾಜಿಗಳ ಲಿಸ್ಟು.

	ಕೆಲಸದ ಹೆಸರು.	ಅಂದಾಜು ನೊಬಲಗು.	ಪರಾ.
	ಮುಂಜರಾಬಾದ್ ತಾಲ್ಲೂಕು.	ರೂ.	
1.	ಸಕಲೇಶಪುರದ ಮುಸಾಫರಖಾನಾ ರಿಪೇರಿ ...	125	ಮುಂಜೂರ್ಮಾಡಿರುತ್ತೆ. ಡಿಟೋ ಸಕಲೇಶಪುರದ ಮುಸಾಫರಖಾನೆಗಾಗಿ ಬಡ್ಜೆಟ್ಟಿನಲ್ಲಿ 50
2.	ಹಾನ್ಬಾಳ್ ಮುಸಾಫರ್‌ಖಾನಾ ರಿಪೇರಿ ...	25	
3.	ಸಕಲೇಶಪುರದ ಈ ಸ್ಪಲೇರ್ಷ ನತ್ರದ ಕಾಂಪೌಂಡಿನಲ್ಲಿ ಬಂದು ಕಕ್ಕಸು ಕಟ್ಟಿಸುವದಕ್ಕೆ.	169	ಮುಂಜೂರ್ಮಾಡಿರುತ್ತೆ. ರೂಪಾಯಿ ಮಾತ್ರ ಇದೆ. ಬಾಕಿ
4.	ಅಬ್ಬಿನಬನವಾಸೆ ರಸ್ತೆ ರಿಪೇರಿ	32	ಡಿಟೋ 75 ರೂಪಾಯಿಗ
5.	ಯಸಳೂರು ಪೇಟೆಯಲ್ಲಿ ಬಂದು ದೊಡ್ಡಿ ಕಟ್ಟಿಸುವದಕ್ಕೆ ...	432	ಡಿಟೋ ಳು ಹಾನ್ಬಾಳ್ ಮು
6.	ಹುಣಸೆ ಶನಿವಾರಸಂತೆ ರಸ್ತೆ ರಿಪೇರಿ	40	ಡಿಟೋ ಸಾಫರ್‌ಖಾನೆಗೆ ಇ
7.	ಹೊಸಕೋಟೆ ಈಚಲಬೀಡು ರಸ್ತೆ ರಿಪೇರಿ	40	ಡಿಟೋ ರುವ 100 ರೂ
8.	ಕೆಂಚಮ್ಮನ ಹೊಸಕೋಟೆ ಮುಸಾಫರಖಾನಾ ರಿಪೇರಿ ...	50	ಡಿಟೋ ಪಾಯಿಗಳ ಪೈಕಿ
9.	ಕಾಡಮನೆ ಮಾರ್ನಹಳ್ಳಿ ರಸ್ತೆ ರಿಪೇರಿ	80	ಡಿಟೋ ಕೊಡತಕ್ಕದ್ದು.
10.	ಹೆತ್ತೂರು ಕೆರೋಡಿ ರಸ್ತೆಗೆ ಸ್ಪೆಷಲ್ ರಿಪೇರಿ ...	150	ಡಿಟೋ
	ಚನ್ನರಾಯಪಟ್ಟಣ ತಾಲ್ಲೂಕು.		
11.	ಶ್ರವಣಬೆಳಗುಳದಲ್ಲಿ ಜೈನರ ಬೀದಿ ರಸ್ತೆ ರಿಪೇರಿ ...	50	ಮುಂಜೂರ್ಮಾಡಿರುತ್ತೆ.
12.	ಬಾಗೂರು ಯೂನಿರ್ಯನಲ್ಲಿ ಪೊಲೀಸ್ ಸ್ಟೇಷ್‌ನಲ್ಲಿ ಇರತಕ್ಕ ರಸ್ತೆ ರಿಪೇರಿ.	50	ಡಿಟೋ
13.	ಹಿರಿಸಾವೆ ಯೂನಿಯನ್ನಲ್ಲಿ ಪೇಟೆ ರಸ್ತೆ ರಿಪೇರಿ ...	50	ಡಿಟೋ
14.	ಚನ್ನರಾಯಪಟ್ಟಣದ ರಸ್ತೆಯಿಂದ ನುಗ್ಗಿಹಳ್ಳಿ ಯೂನಿಯನ್ನಲ್ಲಿರುವ ಕೋಟೆಗೆ ಹೋಗತಕ್ಕ ರಸ್ತೆ ರಿಪೇರಿ.	50	ಡಿಟೋ
	ಬೇಲೂರು ತಾಲ್ಲೂಕು.		
15.	ಯಕ್ಕೆಸ್ಟಟ್ಟಿಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ತೆಗೆದಿರತಕ್ಕ ಭಾವಿಗೆ ಕಲ್ಲು ಕಟ್ಟಿಸತಕ್ಕ ಬಗ್ಗೆ.	200	ಡಿಟೋ
16.	ಬಿಕ್ಕೋಡಿನಿಂದ ಆಲೂರು ಎಲ್ಲೆಯ ವರಿಗೂ ಹೋಗತಕ್ಕ ರಸ್ತೆ ರಿಪೇರಿ.	150	ಡಿಟೋ
17.	ಹಗರೆ ಹಳ್ಳೇಬೀಡು ರಸ್ತೆಯನ್ನು ಉತ್ತಮಸ್ಥಿತಿಗೆ ತರತಕ್ಕ ಬಗ್ಗೆ.	200	ಡಿಟೋ
18.	ಅರಹಳ್ಳಿ ಗ್ರಾಮದಲ್ಲಿ ಬಂದು ದೊಡ್ಡಿ ಕಟ್ಟಿಸತಕ್ಕ ಬಗ್ಗೆ ...	400	ಡಿಟೋ.
19.	ಹಳ್ಳೇಬೀಡು ಯೂನಿಯನ್ನಲ್ಲಿ ರಸ್ತೆ ರಿಪೇರಿಗಾಗಿ ...	124	ಡಿಟೋ
	ಅರ್ಕಲಗೂಡು ತಾಲ್ಲೂಕು.		
20.	ರುದ್ರಪಟ್ಟಣದಲ್ಲಿ ನದಿಯ ಬಳಿ ಬಂದು ಮಂಟಪ ಕಟ್ಟಿಸತಕ್ಕ ಬಗ್ಗೆ.	250	ಡಿಟೋ
21.	ಕೆರಳಾಪುರದ ಯೂನಿರ್ಯ ದೊಡ್ಡಿಯನ್ನು ಉತ್ತಮಸ್ಥಿತಿಗೆ ತರತಕ್ಕ ಬಗ್ಗೆ.	110	ಡಿಟೋ
	ಅರಸೀಕೆರೆ ತಾಲ್ಲೂಕು.		
22.	ಅರಸೀಕೆರೆ ರಂಗಾಚಾರ್ಲು ಛತ್ರದ ರಿಪೇರಿ ...	250	ಡಿಟೋ

ಪಿ. ಆರ್. ಡಬ್ಲ್ಯು. ವೆದರಾಲ್,
ಪ್ರೆಸಿಡೆಂಟ್.